# ಉತ್ತರ ಕನ್ನಡ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಮಕ್ಷಮದಲ್ಲಿ

ಅಧೀಕ್ಷಕ ಇಂಜಿನೀಯರ (ವಿ) ರವರ ಕಛೇರಿ, ಕಾರ್ಯ ಮತ್ತು ಪಾಲನಾ ವೃತ್ತ, ಹೆಸ್ಕಾಂ, ಬಿಲ್ಡಿಂಗ್ # 258/2,
ಅಯ್ಯಪ್ಪ ನಗರ, ಹುಬ್ಬಳ್ಳಿ ರಸ್ತೆ, ಶಿರಸಿ [ಉ.ಕ] – 581 402.

**ಉಪಸ್ಥಿತಿ:**

1. ಶ್ರೀ. ದೀಪಕ ಬಾಬು ಕಾಮತ,
   ಅಧೀಕ್ಷಕ ಇಂಜಿನಿಯರ್(ವಿ),
   ಹಾಗೂ ವೇದಿಕೆಯ ಅಧ್ಯಕ್ಷರು.
2. ಶ್ರೀ. ಶಶಿಕಾಂತ ವಿ. ಪ್ರಭು,
   ಉಪ–ಲೆಕ್ಕನಿಯಂತ್ರಣಾಧಿಕಾರಿ ಹಾಗೂ
   ವೇದಿಕೆಯ ಸದಸ್ಯರು.
3. ಶ್ರೀ. ಲೋಕೇಶ ಎಲ್. ಹೆಗಡೆ,
   ಆಯೋಗದಿಂದ ನಿಯೋಜಿಸಲಾದ
   ಅಧಿಕಾರೇತರ ಸದಸ್ಯರು.

## ಪ್ರಕರಣ ಸಂಖ್ಯೆ: CGRF/UK/35/2022
## ಆದೇಶ ದಿನಾಂಕ: 18.01.2023

ಶ್ರೀ. ಗಣೇಶ ಪರಮೇಶ್ವರ ಹೆಗಡೆ,
ನಿಲಕೋಡ, ತಾ: ಹೊನ್ನಾವರ. ..............................**ದೂರುದಾರರು.**

V/S

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ),
ಕಾರ್ಯ ಮತ್ತು ಪಾಲನಾ ಉಪ–ವಿಭಾಗ,
ಹೆಸ್ಕಾಂ., ಹೊನ್ನಾವರ. ..............................**ಪ್ರತಿವಾದಿ.**

## I) ದೂರಿನ ವಿವರ:

1) ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ: ಹೊನ್ನಾವರ ಇವರು ಸ್ಥಾವರ ಸಂಖ್ಯೆ: NIP-34220 ಯನ್ನು ನಮೂದಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗ (ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ ಮತ್ತು ಓಂಬಡ್ಸಮನ್) ನಿಬಂಧನೆಗಳು–2004 ಮತ್ತು ತಿದ್ದುಪಡಿ ಆದೇಶ ಸಂ.ಡಿ/37/03/10.05.2013 ರಡಿಯಲ್ಲಿ ಒದಗಿಸಲಾದ ನಿಬಂಧನೆಗಳು 6.1 & 6.2 ಅವಕಾಶದಡಿಯಲ್ಲಿ **'ನಮೂನೆ–ಎ'** ರಲ್ಲಿ ದಿನಾಂಕ: 10.10.2022 ರಲ್ಲಿ (ದಿನಾಂಕ: 13.10.2022 ರಂದು ಸ್ವೀಕೃತವಾಗಿರುತ್ತದೆ) ಈ ವೇದಿಕೆಯ ಮುಂದೆ ದೂರು ಅರ್ಜಿ ದಾಖಲಿಸಿರುತ್ತಾರೆ.

2) ಈ ಕಛೇರಿ ಪತ್ರ ಸಂಖ್ಯೆ: ಅಣಂ(ವಿ)/ಉಲೆನಿ/ಹಿಸ-2/CGRF/2022-23/8667-68, ದಿನಾಂಕ: 20.10.2022 ರಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ಪ್ರಕರಣಕ್ಕೆ ಸಂಬಂಧಿಸಿದ ಪರಿಚ್ಛೇದನಾ ಟೀಕೆಯನ್ನು ದಾಖಲೆಗಳೊಂದಿಗೆ (Parawise Comments) ಸಲ್ಲಿಸಲು ಸೂಚಿಸಲಾಗಿತ್ತು. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ & ಪಾಲನಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರು ಪರಿಚ್ಛೇದನಾ ಟೀಕೆಯನ್ನು ದಾಖಲೆಗಳೊಂದಿಗೆ ಪತ್ರ ಸಂ. ಸಕಾನಿಇಂ(ವಿ)/ಹೊನ್ನಾವರ /ಸ.ಇಂ(ತಾ)/ 22-23/8810-11, ದಿನಾಂಕ: 03.11.2022 ರಂತೆ ಈ ಕಚೇರಿಗೆ ಸಲ್ಲಿಸಿರುತ್ತಾರೆ.

3) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರು ಪತ್ರ ಸಂಖ್ಯೆ: ಸಕಾನಿಇಂ(ವಿ)/ಹೊನ್ನಾವರ/ಸಇಂ(ತಾ)/22-23/9571, ದಿನಾಂಕ: 19.11.2022 ರಂತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಪರಿಚ್ಛೇದನಾ ಟೀಕೆಯನ್ನು (Parawise Comments) ದಾಖಲೆಗಳೊಂದಿಗೆ ಈ ಕಛೇರಿಗೆ ಸಲ್ಲಿಸಿರುತ್ತಾರೆ.

4) ಪತ್ರ ಸಂಖ್ಯೆ: ಅಣಂ(ವಿ)/ಉಲೆನಿ/ಹಿಸ-2/CGRF/2022-23/9698-700, ದಿನಾಂಕ: 09.11.2022 ರ ಮೂಲಕ ದೂರುದಾರರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ, ಹೊನ್ನಾವರ ರವರನ್ನು ದಿನಾಂಕ: 22.11.2022 ರಂದು ಬೆಳಿಗ್ಗೆ 11.00 ಗಂಟೆಗೆ ಶಿರಸಿ ವೃತ್ತ ಕಛೇರಿಗೆ ವಿಚಾರಣೆಗೆ ಹಾಜರಾಗಲು ತಿಳಿಸಲಾಗಿತ್ತು.

5) ಪ್ರಕರಣದ ವಿಚಾರಣೆಯು ದಿನಾಂಕ: 22.11.2022 ರಂದು ಜರುಗಬೇಕಾಗಿದ್ದು, ಆಡಳಿತಾತ್ಮಕ ಕಾರಣಾಂತರದಿಂದ ದಿನಾಂಕ 22.11.2022 ರ ಬದಲಾಗಿ ದಿನಾಂಕ: 29.11.2022 ರಂದು ನಿಗದಿಪಡಿಸಿರುವುದಾಗಿ ಈ ಕಚೇರಿ ಪತ್ರ ಸಂ. ಅಣಂ(ವಿ)/ಉಲೆನಿ/ಹಿಸ-2/CGRF/2022-23/9724-26, ದಿನಾಂಕ: 14.11.2022 ರಲ್ಲಿ ತಿಳಿಸಿ ವಿಚಾರಣೆಗೆ ಹಾಜರಾಗಲು ತಿಳಿಸಲಾಗಿತ್ತು.

6) ಪ್ರಕರಣದ ಬಗ್ಗೆ ದಿನಾಂಕ 29.11.2022 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯಲ್ಲಿ ವಿಚಾರಣೆಯನ್ನು ಜರುಗಿಸಿ ದೂರುದಾರರ ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರ ಹೇಳಿಕೆಯನ್ನು ಪಡೆಯಲಾಗಿದೆ ಹಾಗೂ ಪ್ರಕರಣದ ಬಗ್ಗೆ ಮಧ್ಯಂತರ ಆದೇಶ-1 ರ ಆದೇಶ ಸಂಖ್ಯೆ: ಅಣಂ(ವಿ)/ ಉಲೆನಿ/ ಹಿಸ-2/ ಕ-ಸಿ.ಜಿ.ಆರ್.ಎಫ್/ ಪ.ಸಂ-35/ 2022/ 2022-23/ CYS-244, ದಿನಾಂಕ: 29.11.2022 ವನ್ನು ಹೊರಡಿಸಿ ಸ್ಥಾವರ ಸಂಖ್ಯೆ NIP-34220, NIP-23 NL-68, NL-35 ಗಳಿಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ಮಾಡಿ ಪ್ರಸ್ತುತ ಸ್ಥಿತಿ-ಗತಿಗಳ ಬಗ್ಗೆ ಪರಿಪೂರ್ಣ ಸ್ಥಳ ಪರಿಶೀಲನಾ ವರದಿಯೊಂದಿಗೆ ದಿನಾಂಕ: 16.12.2022 ರಂದು ವಿಚಾರಣೆಗೆ ಹಾಜರಾಗುವಂತೆ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ಆದೇಶಿಸಲಾಗಿತ್ತು. ಸದರಿ ಆದೇಶವನ್ನು ಪತ್ರ ಸಂ. ಅಣಂ(ವಿ)/ಉಲೆನಿ/ಹಿಸ-2/ಕ-ಸಿ.ಜಿ.ಆರ್.ಎಫ್/2022-23/10997 ದಿನಾಂಕ: 30.11.2022 ರಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ತಿಳಿಸಲಾಗಿತ್ತು.

7) ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ ತಾ: ಹೊನ್ನಾವರ ರವರು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ದಿನಾಂಕ 10.12.2022 ರಂದು ಮಧ್ಯಂತರ ಮನವಿ-2 ನೀಡಿದ್ದು ದಿನಾಂಕ 12.12.2022 ರಂದು ಸ್ವೀಕೃತವಾಗಿರುತ್ತದೆ.

8) ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ ತಾ: ಹೊನ್ನಾವರ ರವರು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ದಿನಾಂಕ 07.12.2022 ರಂದು ತಕರಾರು ಅರ್ಜಿ ನೀಡಿದ್ದು ದಿನಾಂಕ 12.12.2022 ರಂದು ಸ್ವೀಕೃತವಾಗಿರುತ್ತದೆ.

9) ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ ತಾ: ಹೊನ್ನಾವರ ರವರು ದಿನಾಂಕ: 10.12.2022 ರ ಮಧ್ಯಂತರ ಮನವಿ-2 ಹಾಗೂ ದಿನಾಂಕ: 07.12.2022ರ ತಕರಾರು ಅರ್ಜಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ಪತ್ರ ಸಂಖ್ಯೆ: ಅಇಂ(ವಿ)/ಉಲೆನಿ/ಹಿಸ-2/ಕ-ಸಿ.ಜಿ.ಆರ್.ಎಫ್/2022-23/11724, ದಿನಾಂಕ: 12.12.2022 ರಂತೆ ಕಳುಹಿಸಿಕೊಡಲಾಗಿದ್ದು, ಸದರಿ ಅರ್ಜಿಗಳನ್ನು ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಕೊಂಡು ಕೈಕೊಂಡ ಕ್ರಮದ ಬಗ್ಗೆ ದಿನಾಂಕ 16.12.2022 ರಂದು ಜರುಗಲಿರುವ ಸಿ.ಜಿ.ಆರ್.ಎಫ್ ವಿಚಾರಣೆಯಲ್ಲಿ ಪ್ರಸ್ತುತ ಪಡಿಸುವಂತೆ ಸೂಚಿಸಲಾಗಿತ್ತು.

10) ಸ್ಥಾವರ ಸಂಖ್ಯೆ NIP-34220, NIP-23 NL-68, NL-35 ಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ ರವರು ಸ್ಥಳ ಪರಿಶೀಲನೆ ಮಾಡಿ ದಿನಾಂಕ: 16.12.2022 ರಂದು ವೇದಿಕೆಯ ಮುಂದೆ ವಿಚಾರಣೆಗೆ ಹಾಜರಾಗಿ ಪ್ರಸ್ತುತ ಸ್ಥಿತಿ-ಗತಿಗಳ ಬಗ್ಗೆ ಪರಿಪೂರ್ಣ ಸ್ಥಳ ಪರಿಶೀಲನಾ ವರದಿಯನ್ನು ಪತ್ರ ಸಂ. ಹೊನ್ನಾವರ/ಕಾನಿಇಂ(ವಿ)/ಸಕಾನಿಇಂ(ಕ)/2022-23/12916, ದಿನಾಂಕ: 15.12.2022 ರಲ್ಲಿ ಹಾಜರ್ ಪಡಿಸಿರುತ್ತಾರೆ.

## II) ಪ್ರಕರಣದ ಸಾರಾಂಶ:

ದೂರುದಾರರು ದಿನಾಂಕ: 10.10.2022 ರಂದು ನೀಡಿದ ದೂರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರ ಪತ್ರ ಸಂಖ್ಯೆ: ಸಕಾನಿಇಂ(ವಿ)/ಹೊನ್ನಾವರ/ಸ.ಇಂ(ತಾ)/2022-23/9571, ದಿನಾಂಕ: 19.11.2022 ರಲ್ಲಿ ತಿಳಿಸಿದಂತೆ ಪ್ರಕರಣದ ಸಾರಾಂಶ ಈ ಕೆಳಗಿನಂತಿರುತ್ತದೆ.

1. ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ: ಹೊನ್ನಾವರ ರವರ ಹೆಸರಿನಲ್ಲಿರುವ ನೀರಾವರಿ ಪಂಪ್ ಸೆಟ್ ಸ್ಥಾವರ ಸಂಖ್ಯೆ: NIP-34220 ಕ್ಕೆ LT-4 ರಿಂದ LT-7 ಗೆ ದುರುಪಯೋಗ ಮಾಡಿದ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಜಾಗೃತ ದಳ, ಪೋಲಿಸ್ ಠಾಣೆ ಹೆಸ್ಕಾಂ, ಕಾರವಾರ ರವರು ಅಸಂಜ್ಞಾ ಪ್ರಕರಣ ಕ್ರಮ ಸಂಖ್ಯೆ: 7/22 ದಿನಾಂಕ: 19.01.2022 ರಂತೆ ದಾಖಲಿಸಿರುತ್ತಾರೆ. ಆ ಪ್ರಕಾರ ಸದರಿ ಸ್ಥಾವರ ಸಂಖ್ಯೆ: NIP-34220 ಕ್ಕೆ ರೂ. 5,500/- ಹಿಂಬಾಕಿ ಮೊತ್ತ ಪಾವತಿಸುವಂತೆ ಪತ್ರ ಸಂಖ್ಯೆ: ಹೊನ್ನಾವರ/ಸ.ಕಾ.ನಿ.ಇಂ(ವಿ)/ಕಂದಾಯ-14481, ದಿನಾಂಕ: 24.03.2022 ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ & ಪಾಲನಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರು ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ: ಹೊನ್ನಾವರ ರವರಿಗೆ ತಿಳಿಸಿರುತ್ತಾರೆ.

2. ಅರ್ಜಿದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರು ದಿನಾಂಕ: 04.11.2021 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ, ಹೊನ್ನಾವರ ರವರ ಕಛೇರಿಗೆ ದೂರನ್ನು ನೀಡಿ NIP-23, NL-68 ಹಾಗೂ NIP-34220 ಕ್ಕೆ ವಿದ್ಯುತ್ ಸಂಪರ್ಕ ನೀಡಲು ಮನವಿ ನೀಡಿರುತ್ತಾರೆ ಹಾಗೂ ಆ ನಂತರದಲ್ಲಿ NIP-23, NL-68 ಹಾಗೂ NIP-34220 ಕ್ಕೆ ವಿದ್ಯುತ್ ಸಂಪರ್ಕ ನೀಡಲು ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ, ಹೊನ್ನಾವರ ರವರಿಗೆ ದಿನಾಂಕ: 13.12.2021 ರಂದು ಮನವಿ ನೀಡಿರುತ್ತಾರೆ. ಆದರೆ ದೂರುದಾರರು ನಮೂನೆ-ಎ ದೂರು ಅರ್ಜಿಯಲ್ಲಿ ದಿನಾಂಕ: 13.12.2022 ಎಂದು ತಪ್ಪಾಗಿ ದಾಖಲಿಸಿರುತ್ತಾರೆ. ದೂರು, ದಿನಾಂಕ: 13.10.2022 ರಂದು CGRF ನಲ್ಲಿ ಸ್ವೀಕೃತವಾಗಿದ್ದರಿಂದ ದೂರುದಾರರು ನಮೂನೆ-ಎ ರಲ್ಲಿ 'ದಿನಾಂಕ: 13.12.2022' ಎಂದು ದಾಖಲಿಸಿದ್ದು ತಪ್ಪಾಗಿರುತ್ತದೆ. NIP-23 & NIP-34220 ವಿದ್ಯುತ ಸಂಪರ್ಕ ನೀಡುವ ಲೈನ್ ಮೊದಲಿನಂತೆ ಮುರಿದ ಕಂಬ ಸರಿಪಡಿಸಿ ಸರಿಯಾಗಿ ಮೂರು ಲೈನ್ ನೀಡಲು ಹಾಗೂ ಕಳೆದ 10 ವರ್ಷದಿಂದ ವಿನಾ ಕಾರಣ ವಿದ್ಯುತ್ ಸಂಪರ್ಕ ಕಡಿದಿಟ್ಟ NL-68 ಕ್ಕೆ ವಿದ್ಯುತ್ ಸಂಪರ್ಕ ನೀಡುವಂತೆ ದಿನಾಂಕ: 04.11.2021 ಹಾಗೂ ದಿನಾಂಕ: 13.11.2021 ರ ಮನವಿಯಲ್ಲಿ ದೂರುದಾರರರು ಕೋರಿರುತ್ತಾರೆ.

3. ದಿನಾಂಕ: 04.11.2021 ರ ಮನವಿಗೆ ಸಂಬಂಧಿಸಿದಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ, ಹೊನ್ನಾವರ ರವರು ಪತ್ರ ಸಂಖ್ಯೆ: ಸ.ಕಾ.ನಿ.ಇಂ(ವಿ)/ಹೊನ್ನಾವರ/ಸ.ಇಂ(ತಾ)/22-23/9571, ದಿನಾಂಕ: 19.11.2022 ರಲ್ಲಿ ಈ ಕೆಳಗಿನಂತೆ ಸಂಕ್ಷಿಪ್ತ ವಿವರಣೆ ನೀಡಿರುತ್ತಾರೆ.

"ಅರ್ಜಿದಾರರಾದ ಶ್ರೀ ಗಣೇಶ ಪರಮೇಶ್ವರ ಹೆಗಡೆ ರವರು ದಿನಾಂಕ: 04.11.2021 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಹೆಸ್ಕಾಂ, ಹೊನ್ನಾವರ ಕಛೇರಿಗೆ ದೂರನ್ನು ನೀಡಿ NIP-23 & NIP-34220 ಕ್ಕೆ ವಿದ್ಯುತ್ ಸಂಪರ್ಕ ನೀಡುವ ಲೈನನ್ನು ಮೊದಲಿನಂತೆಯೇ ಸರಿಪಡಿಸಿ ವಿದ್ಯುತ್ ಸರಿಯಾಗಿ ಮೂರು ಫೇಸ್ ಲೈನ್ ನೀಡಲು ಕೋರಿರುತ್ತಾರೆ. ಅದರಂತೆಯೇ ದಿನಾಂಕ: 18.11.2022ರಂದು ಸ್ಥಳಕ್ಕೆ ಮಾರ್ಗದಾಳು ಆದ ಶ್ರೀ ಶಂಕರ ನಾಯ್ಕ ರವರು ಸದರೀ ಸ್ಥಳಕ್ಕೆ ಹೋಗಿ ನೋಡಿದಾಗ ಸದರೀ ಪಂಪಸೆಟ್‌ನಿಂದಲೇ ಶ್ರೀ ಗಣೇಶ ಪರಮೇಶ್ವರ ಹೆಗಡೆರವರು ಹೊಸದಾಗಿ ಕಟ್ಟುತ್ತಿರುವ ಮನೆಗೆ ನೀರು ಹಾಯಿಸುತ್ತಿರುವುದಾಗಿ ತಿಳಿಸಿದ್ದು ಇರುತ್ತದೆ. ಅದರಂತೆ ಈ ಬಗ್ಗೆ ಶಾಖಾಧಿಕಾರಿ ಹೆಸ್ಕಾಂ ಹೊನ್ನಾವರ ಗ್ರಾಮೀಣ ಶಾಖೆ ರವರನ್ನು ವಿಚಾರಿಸಲಾಗಿ, ಸದರೀ ಗ್ರಾಹಕರ ನೀರಾವರಿ ಪಂಪುಸೆಟ್‌ಗೆ ಹೋದ ವಿದ್ಯುತ್ ಮಾರ್ಗವನ್ನು 2010 ನೇ ಸಾಲಿನಲ್ಲಿ ಪಕ್ಕದಲ್ಲಿಯೇ ಇರುವ ಶ್ರೀ. ಕಾಶಿನಾಥ ಭಾಗ್ವತರವರು ಸ್ವಯಂ ಕಾರ್ಯಗತ ಯೋಜನೆಯಲ್ಲಿ ಸ್ಥಳಾಂತರಿಸಿರುವುದಾಗಿ ಹಾಗೂ ಶ್ರೀ. ಗಣೇಶ ಪರಮೇಶ್ವರ ಹೆಗಡೆಯವರ ಪತ್ನಿ ಮೃದುಲಾ ಗಣೇಶ ಹೆಗಡೆ ಇವರು ಹೆಸ್ಕಾಂ ಅಧಿಕಾರಿ ಹಾಗೂ ಗುತ್ತಿಗೆದಾರರ ವಿರುದ್ಧ ಬಲತ್ಕಾರದ ದಾವೆ ಮಾಡಿ ಸದರಿ ದಾವೆಯು ಇಲ್ಲಿಯವರೆಗೆ ಇತ್ಯರ್ಥ ಆಗಿರುವುದಿಲ್ಲ. ಹಾಗೂ ನಾವು ಈ ಬಗ್ಗೆ ಮಹಜರ ಮಾಡಿದಲ್ಲಿ ಕಾನೂನು ಉಪನ್ಯಾಸರಕರಾದ ಶ್ರೀ ಗಣೇಶ ಪರಮೇಶ್ವರ ಹೆಗಡೆ ಇವರು ಇಲ್ಲಸಲ್ಲದ ಆರೋಪ ಮಾಡಿ ವೃಥಾ ತೊಂದರೆ ಕೊಡಬಹುದಾದ ಸಾಧ್ಯತೆ ಇದ್ದು, ಸದರಿ ಸ್ಥಳ ಪರಿಶೀಲನೆಯನ್ನು ಜಾಗೃತದಳವರಿಗೆ ವಹಿಸುವುದು ಸೂಕ್ತ ಎಂದು ತಿಳಿಸಿರುತ್ತಾರೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಜಾಗೃತದಳ, ಕಾರವಾರರವರಿಗೆ ಸದರಿ ಸ್ಥಳ ಪರಿಶೀಲಿಸಲು ತಿಳಿಸಿದಾಗ ದಿನಾಂಕ: 19.01.2022

ರಂದು ಶ್ರೀ ಗಣೇಶ ಪರಮೇಶ್ವರ ಹೆಗಡೆಯವರ ಜಾಗವನ್ನು ಪರಿಶೀಲಿಸಿ NIP-34220 ರ ನೀರಾವರಿ ಪಂಪ್‌ನಿಂದ ಮನೆಕಟ್ಟಲು ಬಳಸುತ್ತಿರುವುದನ್ನು ಗಮನಿಸಿ ಜಕಾತಿ ದುರುಪಯೋಗದ ಮಹಜರು ವರದಿ ನೀಡಿರುತ್ತಾರೆ. ಇದರಿಂದ NIP-34220 ಕ್ಕೆ ವಿದ್ಯುತ್ ಸಂಪರ್ಕ ಇರುವುದು ಖಚಿತವಾಗಿರುತ್ತದೆ."

4. ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ತಂದೆಯವರಾದ ಶ್ರೀ. ಪರಮೇಶ್ವರ ಗಣೇಶ ಹೆಗಡೆ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ಹಾಗೂ ಶ್ರೀ. ಕಾಶಿನಾಥ ಗೋವಿಂದ ಭಾಗ್ವತ, ನೀಲಕೋಡ, ಹೊನ್ನಾವರ ರವರ ವಿರುದ್ಧ ಸ್ಥಾವರ ಸಂಖ್ಯೆ: NIP-23 ಕ್ಕೆ ಸಂಪರ್ಕ ಕಲ್ಪಿಸುವ ಸರ್ವೆ ನಂ. 81 ರಲ್ಲಿ ಹಾದು ಹೋಗಿದ ವಿದ್ಯುತ್ ಮಾರ್ಗದ ಬಗ್ಗೆ ಉತ್ತರ ಕನ್ನಡ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ CC No. 137/2010, *Parameshwar Ganesh Hegde, At: Neelkodi, Honnavar V/s The Assistant Executive Engineer, HESCOM, Prabhatnagar, Honnavar & Kashinath Govind Bhagwat, Neelkodi, Honnavar Taluk* ನ್ನು ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ಮಾನ್ಯ ಉತ್ತರ ಕನ್ನಡ ಜಿಲ್ಲಾ ಗ್ರಾಹಕರ ವೇದಿಕೆ, ಕಾರವಾರ ರವರು ನೀಡಿದ ತೀರ್ಪಿನ ಉದ್ಧೃತ ಭಾಗವು ಈ ಕೆಳಗಿನಂತಿದೆ.

> ......
>
> 15) The above recital in the agreement clearly goes to show that the service line is the property of the KPTCL authorities. Therefore, there is no question of either obtaining consent of the complainant or issuing notice to him before undertaking the shifting work. The complainant cannot object for shifting of the service line if his right to have the power supply is not affected. We have already stated above that the power supply was temporarily disconnected only for the purpose of shifting the service line. **<u>If the complainant had not objected for the shifting work the KPTCL authorities could have restored the power supply without any difficulty</u>. But they could not restore the power supply only because of the objection raised by the complainant. Since the fault lies with the complainant, he cannot maintain a complaint under C.P. Act alleging deficiency of service on the part of the KPTCL authorities. Consequently, we answer point No.1 in the negative.**
>
> 16) <u>Point No.2</u> :- In view of our finding on point No.1, we proceed to pass the following -
>
> <u>-:ORDER:-</u>
>
> **The complaint is dismissed**. Parties to bear their respective costs..
>
> The copies of this order shall be supplied to both the parties.
>
> (Dictated to the stenographer and got it transcribed and corrected and pronounced in the open Forum on this 28th day of June, 2011)

[ಒತ್ತು ನೀಡಲಾಗಿದೆ]

ಉತ್ತರ ಕನ್ನಡ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ನಿರ್ಣಯದ ವಿರುದ್ಧ ಶ್ರೀ. ಪರಮೇಶ್ವರ ಗಣೇಶ ಹೆಗಡೆ ರವರು ಗೌರವಾನ್ವಿತ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಮೇಲ್ಮನವಿ ಸಲ್ಲಿಸಿದ್ದು (Appeal No-2220/2011) ಆಯೋಗವು ಸದರಿ ಮೇಲ್ಮನವಿಯನ್ನು ವಜಾಗೊಳಿಸಿರುತ್ತದೆ. ಆಯೋಗದ ತೀರ್ಪಿನ ಉದ್ಧೃತ ಭಾಗ ಈ ಕೆಳಗಿನಂತಿದೆ.

> .....
>
> 10. Merely because there was a civil dispute between him and others is not a ground to complete the shifting of electric line which was passing from the middle of land of Sy. No. 81/2 to the western edge. Therefore, there is no deficiency of service on the part of OPs and the appellant has not shown any good reasons to entertain this appeal. Therefore, viewed from any angle, we don't notice any perverse or incorrect finding recorded by the DF in passing the impugned order under appeal and it does not require any interference. Accordingly, we pass the following:
>
> **ORDER**
>
> Appeal is dismissed confirming the order under appeal passed by the DF, Karwar in Complaint No. 137/2010 dated 28.06.2011.
> No order as to costs.

5. ಗ್ರಾಹಕರಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಹೆಸ್ಕಾಂ, ಹೊನ್ನಾವರರವರ ಕಛೇರಿಯಿಂದ ಕ್ರಮಾಂಕ: ಹೊನ್ನಾವರ/ಸ.ಕಾ.ನಿ.ಇಂ(ವಿ)/ಕಂದಾಯ-14481, ದಿನಾಂಕ: 24.03.2022 ರಂದು ಪತ್ರ ಬರೆದು ಜಾಗೃತದಳದವರು ಕಂಡು ಹಿಡಿದ ಹಿಂಬಾಕಿ ಮೊತ್ತ ರೂ. 5,500/- ನ್ನು ಪಾವತಿಸಲು ಸೂಚಿಸಲಾಗಿತ್ತು. ಒಂದು ವೇಳೆ ಗ್ರಾಹಕರ ಆಕ್ಷೇಪಣೆ ಇದ್ದಲ್ಲಿ 15 ದಿವಸಗಳ ಒಳಗಾಗಿ ಹಿಂದಾಕರಣೆ ಮೊತ್ತದ ಶೇಕಡಾ 50 ರಷ್ಟು ಹಣ ಪಾವತಿ ಮಾಡಲು ತಿಳಿಸಲಾಗಿತ್ತು. ಆದರೆ ಗ್ರಾಹಕರು ಈ ಬಗ್ಗೆ ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ಶ್ರೀ. ಗಣೇಶ ಪರಮೇಶ್ವರ ಹೆಗಡೆಯವರು ದಿನಾಂಕ 13.10.2022 ರಂದು "ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ" ಯಲ್ಲಿ ಅರ್ಜಿ **"ನಮೂನೆ-ಎ"** ಪ್ರಕಾರ ದೂರು ದಾಖಲಿಸಿರುತ್ತಾರೆ. ನಮೂನೆ-ಎ ರಲ್ಲಿ ದಾಖಲಿಸಿದಂತೆ ದೂರಿನ ವಿವರ ಈ ಕೆಳಗಿನಂತಿದೆ.

| | |
|---|---|
| **ದೂರು/ಕುಂದುಕೊರತೆಗಳ ವಿವರಗಳು:** | ವಿದ್ಯುತ್ ದುರ್ಬಳಕೆ ಮಾಡದಿದ್ದರೂ LT-4 ರಿಂದ LT-7 ಕ್ಕೆ ಬಳಕೆ ಮಾಡಿದ್ದಾರೆಂದು ಸುಳ್ಳು ಆರೋಪ ಮಾಡಿ ವಿನಾಕಾರಣ ಹಳೆದ್ವೇಶದಿಂದ ರೂ. 5500.00 ರೂಪಾಯಿ ದುರುದ್ದೇಶದಿಂದ ವಿಧಿಸಿರುವುದರ ವಿರುದ್ಧ ಮತ್ತು ಕೃಷಿ ಪಂಪಿನ ಲೈನ್ ತಪ್ಪಿಸಿ ಒಂದು ಲಕ್ಷ ರೂಪಾಯಿ ಲುಕ್ಸಾನು ಮಾಡಿದ್ದರ ವಿರುದ್ಧ ದೂರು. ಉದ್ದೇಶ ಪೂರ್ವಕವಾಗಿ ಪ್ರಾಧಿಕಾರ ವ್ಯಾಪ್ತಿ ತಪ್ಪಿಸಲು ಸೆಕ್ಷನ್-126, 135, 136 ನಮೂದಿಸಿರುವದರ ವಿರುದ್ಧ ದೂರು. |

6. ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ ರವರ ಗ್ರಾಹಕರ ಕುಂದುಕೊರತೆಯ ವಿಚಾರಣಾ ವೇದಿಕೆಯಲ್ಲಿ ನೀಡಿದ ಹೇಳಿಕೆಯ ಅಂಶಗಳು ಈ ಕೆಳಗಿನಂತಿವೆ.

- 2010 ನೇ ಇಸವಿಯಲ್ಲಿ ಶ್ರೀ. ಕಾಶಿನಾಥ ಭಾಗ್ವತ ಇವರು ತಮ್ಮ ಜಾಗದ ಮೇಲಿಂದ ಶ್ರೀ. ಪರಮೇಶ್ವರ ಗಣೇಶ ಹೆಗಡೆ ಇವರ ಸ್ಥಾವರಗಳಿಗೆ ಸಂಪರ್ಕಿತವಾಗಿದ್ದ 3 ಫೇಸ್ 4 ವಾಯರ್ ವಿದ್ಯುತ್ ಮಾರ್ಗವನ್ನು ಸ್ವಯಂಕಾರ್ಯತದ ಯೋಜನೆಯಡಿಯಲ್ಲಿ ಶ್ರೀ. ಕಾಶಿನಾಥ ಭಾಗ್ವತ ಅವರದೇ ಜಾಗದಲ್ಲಿ ಸ್ಥಳಾಂತರ ಮಾಡಿಸಲು ಅಂದಾಜು ಪಟ್ಟಿ ಮಂಜೂರು ಮಾಡಿಕೊಂಡು ಗುತ್ತಿಗೆದಾರರ ಮೂಲಕ ಕೆಲಸ ಮಾಡಿಸುವಾಗ ಶ್ರೀ. ಪರಮೇಶ್ವರ ಗಣೇಶ ಹೆಗಡೆ ರವರು ತಕರಾರು ಮಾಡಿದ್ದರಿಂದ, ಸ್ಥಳಾಂತರದ ಸಲುವಾಗಿ ಕಳಚಿದ ವಿದ್ಯುತ್ ಮಾರ್ಗವನ್ನು ಅಳವಡಿಸಲಾಗದೇ ಕಾಮಗಾರಿ ಅಪೂರ್ಣವಾಗಿ ಉಳಿದಿರುತ್ತದೆ. ನಂತರದಲ್ಲಿ ಕೋಟೆಡ್ ಸರ್ವಿಸ್ ವಾಯರ್ ಎಳೆದು ಶ್ರೀ. ಪರಮೇಶ್ವರ ಗಣೇಶ ಹೆಗಡೆ ಇವರ ಸ್ಥಾವರಗಳಿಗೆ ವಿದ್ಯುತ ಸಂಪರ್ಕ ನೀಡಲಾಗಿರುತ್ತದೆ.

- 2014 ನೇ ಇಸವಿಯಲ್ಲಿ ಮೊದಲಿದ್ದ ರೀತಿಯಲ್ಲೇ ತಮ್ಮ ಜಾಗದ ಮೇಲಿಂದ ವಿದ್ಯುತ ಮಾರ್ಗ ಎಳೆಯಬಹುದೆಂದು ಊಹಿಸಿ ಆ ರೀತಿ ಮಾರ್ಗ ಎಳೆಯುವದನ್ನು ತಡೆಯಲು ಶ್ರೀ ಕಾಶೀನಾಥ ಭಾಗ್ವತ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ, ಪ್ರಧಾನ ವ್ಯವಸ್ಥಾಪಕರು ಹೆಸ್ಕಾಂ., ಹುಬ್ಬಳ್ಳಿ ಹಾಗೂ ಇತರರ ವಿರುದ್ಧ ಹೊನ್ನಾವರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾವಾ ಹೂಡಿದ್ದು ಪ್ರಕರಣ ಸಂಖ್ಯೆ ಓ.ಎಸ್.12/2014 ಆಗಿರುತ್ತದೆ. ಸದ್ರಿ ದಾವೆಗೆ ಸಂಬಂಧಿಸಿದಂತೆ ಶ್ರೀ ಕಾಶೀನಾಥ ಭಾಗ್ವತ (plaintiff) ಮಾಡಿರುವ claim ನ್ನು ಹಾಗೂ ಶ್ರೀ. ಪರಮೇಶ್ವರ ಗಣೇಶ ಹೆಗಡೆ & ಶ್ರೀ ಗಣೇಶ ಪರಮೇಶ್ವರ ಹೆಗಡೆ (defendants) ಇವರು ಮಾಡಿರುವ counter claim ನ್ನು ತೊಡೆದು ಹಾಕಲಾಗಿರುತ್ತದೆ.

- ನಂತರ ದಿನಾಂಕ: 19.07.2019 ರಂದು ಶ್ರೀ ಕಾಶೀನಾಥ ಭಾಗ್ವತರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪವಿಭಾಗ, ಹೆಸ್ಕಾಂ., ಹೊನ್ನಾವರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ., ಹುಬ್ಬಳ್ಳಿ ಹಾಗೂ ಇತರರ ವಿರುದ್ಧ ಹೊನ್ನಾವರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ರೆಗ್ಯುಲರ್ ಅಪೀಲ್ ದಾವಾ ಹೂಡಿದ್ದು ಪ್ರಕರಣ ಸಂಖ್ಯೆ ಆರ್.ಎ/05/2019 ಆಗಿದ್ದು ವಿಚಾರಣಾ ಹಂತದಲ್ಲಿರುತ್ತದೆ.

- ಸದರಿ ಪ್ರಕರಣವನ್ನು (RA/No.-5/2019) ವಕೀಲರಾದ ಶ್ರೀ. ಕೆ. ಎಸ್. ಭಟ್, ಇವರು ಹೆಸ್ಕಾಂ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದು ಪ್ರಕರಣವು ನ್ಯಾಯಾಲಯದ ಮುಂದೆ ಇತ್ಯರ್ಥಕ್ಕೆ ಇದ್ದು ಹಾಗೂ ಅಂತಿಮ ವಾದಕ್ಕೆ ಬಾಕಿ ಇರುವದರಿಂದ ಸದರಿ ಜಾಗದಲ್ಲಿ ವಿದ್ಯುತ್ ಮಾರ್ಗದ ಸ್ಥಿತಿಯನ್ನು ಯಥಾ ಸ್ಥಿತಿ ಕಾಯ್ದುಕೊಂಡು ಹೋಗುವುದು ಸೂಕ್ತ ಎಂದು ಕಾನೂನು ಸಲಹೆ ನೀಡಿರುತ್ತಾರೆ.

## III) ಬೇಡಿಕೆಗಳು:

1. ಅಧಿಕಾರಿಗಳಿಂದ ಆದ ಉಪದ್ರವದಿಂದ ಉಂಟಾದ ಒಂದು ಲಕ್ಷ ರೂಪಾಯಿ ಲುಕ್ಷಾನನ್ನು ಮರುಬರಿಕೆ ಮಾಡಿಕೊಡುವಂತೆ ಮನವಿ.
2. NIP-34220 ಕ್ಕೆ ಸಂಪರ್ಕ ಕಲ್ಪಿಸುವ ಲೈನ್ ಸರಿಪಡಿಸಲು ಮನವಿ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಹೆಸ್ಕಾಂ., ಹೊನ್ನಾವರ ಇವರ ಆದೇಶ ಸಂ. ಹೊನ್ನಾವರ/ಸಕಾನಿಇಂ(ವಿ)/ಕಂದಾಯ/14481 ದಿನಾಂಕ: 24.03.2022 ರದ್ದುಪಡಿಸುವಂತೆ ಮನವಿ.
4. ಉಪದ್ರವ ನೀಡಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಮನವಿ.

## IV) ಹೇಳಿಕೆಗಳು:

ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ: ಹೊನ್ನಾವರ ರವರು ದಿನಾಂಕ: 29.11.2022 ರಂದು ವೇದಿಕೆಯ ವಿಚಾರಣೆಯಲ್ಲಿ ಹಾಜರಿದ್ದು ಈ ಕೆಳಗಿನಂತೆ ಹೇಳಿಕೆಯನ್ನು ನೀಡಿರುತ್ತಾರೆ.

*"ಶ್ರೀ. ಗಣೇಶ ಪರಮೇಶ್ವರ ಹೆಗಡೆ, ವಯಸ್ಸು-49 ವರ್ಷ, ನೀಲಕೋಡ ತಾ।। ಹೊನ್ನಾವರ ದಿನಾಂಕ: 29.11.2022 ರಂದು ಗ್ರಾಹಕರ ಕುಂದು ಕೊರತೆ ವೇದಿಕೆಗೆ ಹಾಜರಾಗಿ ದಿನಾಂಕ: 18.10.2022 ರ ನನ್ನ ದೂರಿಗೆ ಈ ಕೆಳಗಿನಂತೆ ಹೇಳಿಕೆ ನೀಡಿರುತ್ತೇನೆ.*

*ನಾನು ನೀಲಕೋಡ ಗ್ರಾಮದ ನಿವಾಸಿಯಾಗಿದ್ದೇನೆ. 2016 ರಲ್ಲಿ ನನ್ನ ತಂದೆಯವರು ತೀರಿಕೊಂಡರು ಆದಾದ ನಂತರ ನನ್ನ ಕೃಷಿ ಭೂಮಿಯ ನಿರ್ವಹಣೆಯ ಜವಾಬ್ದಾರಿ ನನಗೆ ಬಂದಿರುತ್ತದೆ. ಅಗಸ್ಟ-2021 ರಲ್ಲಿ ಏಕಾಏಕಿ ನನ್ನ ಸ್ಥಾವರ ಸಂಖ್ಯೆ:* **NIP-34220, NIP-23, NL-68** *ಗಳಿಗೆ ವಿದ್ಯುತ್ 2 ಫೇಸ್ ಗಳಿಗೆ ಮಾತ್ರ ವಿದ್ಯುತ್ ಹರಿಬಿಟ್ಟು ನ್ಯೂಟ್ರಲ್ ಇನ್ನೊಂದು ಫೇಸ್ ಕಟ್ ಮಾಡಲಾಯಿತು. ಮುಂದಿನ ದಿನಗಳಲ್ಲಿ ರಿಪೇರಿ ಮಾಡಬಹುದೆಂದು ಲೈನ್‌ಮನ್ ಗೆ ವಿಷಯ ತಿಳಿಸಿ ಸುಮ್ಮನಾಗಿದ್ದೆ ಆದರೆ ಮಳೆಗಾಲ ನಿಂತರೂ ಸಹಿತ ನನಗೆ ಒಂದು ಫೇಸ್‌ಗೆ ನ್ಯೂಟ್ರಲ್‌ಗೆ ವಿದ್ಯುತ್ ಸಂಪರ್ಕ ಮರು ಜೋಡಿಸಿಲ್ಲ. ಅದಕ್ಕೆ ಸಂಬಂಧಿಸಿದಂತೆ ದಿನಾಂಕ: 04.11.2021 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ಲಿಖಿತವಾಗಿ ದೂರು ನೀಡಿರುತ್ತೇನೆ. ಸದರಿ ಪತ್ರದ ಪ್ರತಿಯನ್ನು ನನ್ನ ದೂರಿಗೆ ಲಗತ್ತಿಸಿದ್ದೇನೆ.*

*ಇದಾದ ನಂತರ ಒಂದು ತಿಂಗಳು ಕಳೆದರೂ ವಿದ್ಯುತ್ ಸಂಪರ್ಕ ನೀಡಿರುವದಿಲ್ಲ. ಹಾಗೂ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವದಿಲ್ಲ. ನಾನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ದಿನಾಂಕ: 13.12.2021 ರಂದು ಇದೇ ವಿಷಯದ ಬಗ್ಗೆ ದೂರನ್ನು ನೀಡಿರುತ್ತೇನೆ (ಸದರಿ ಪತ್ರದ ಪ್ರತಿಯನ್ನು ನನ್ನ ದೂರಿಗೆ ಲಗತ್ತಿಸಿರುತ್ತೇನೆ)*

*ಜನವರಿ-2022 ಕ್ಕೆ ಈ ಮೇಲೆ ಹೇಳಿದ ಐ.ಪಿ ಸ್ಥಾವರಗಳಿಗೆ 3 ಫೇಸ್ ಗಳು ಮಾತ್ರ ನೀಡಲಾಯಿತು. ನ್ಯೂಟ್ರಲ್ ನೀಡಿರುವದಿಲ್ಲ. ಒಂದು ವಾರದವರೆಗೆ 3 ಫೇಸ್ ಇದ್ದು ನಂತರ 2 ಫೇಸ್ ವಿದ್ಯುತ್ ಆಗಿರುವದು ಕಂಡು ಬಂದಿರುತ್ತದೆ. ನಂತರ ನಮ್ಮ ಸೀಮೆಎಣ್ಣೆಯ ಯಂತ್ರ ಇರುವದರಿಂದ ಅಲ್ಪ ಸ್ವಲ್ಪ ನೀರನ್ನು ತೋಟಕ್ಕೆ ಹಾಯಿಸಿರುತ್ತೇನೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ಹಾಸನದಿಂದಲೇ ದೂರವಾಣಿ ಮೂಲಕ ಸಂಪರ್ಕಿಸಿರುತ್ತೇನೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರು ವಿದ್ಯುತ್ ಲೈನ್ ಸಂಪರ್ಕ ಕೊಡುವದಾಗಿ ತಿಳಿಸಿರುತ್ತಾರೆ. ಆದರೆ ಸಂಪರ್ಕ ನೀಡಿರುವದಿಲ್ಲ. ಆ ಬಗ್ಗೆ ಆಗಾಗ ಹಿರಿಯ ಅಧಿಕಾರಿಗಳಿಗೆ ದೂರವಾಣಿ ಮೂಲಕ ತಿಳಿಸಿದ್ದು ಕೂಡ ಇದೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರ ಪತ್ರ ಸಂಖ್ಯೆ: ಹೊನ್ನಾವರ/ಸಕಾನಿಇಂ(ವಿ)/ಕಂದಾಯ/1448, ದಿನಾಂಕ: 24.03.2022 ರಂದು ನಮ್ಮ ಮನೆಗೆ ರಜಿಸ್ಟರ್ ನೋಟೀಸ ನೀಡಿ* **NIP**-*34220 ಸಂಬಂಧಿಸಿದಂತೆ ಜಕಾತಿಯನ್ನು ದುರ್ಬಳಕೆ ಮಾಡಿರುತ್ತೀರೆಂದು ತಿಳಿಸಿ ರೂ. 5500/- ಪಾವತಿಸಲು ಸಹಾಯಕ ಕಾರ್ಯನಿರ್ವಾಹಕ*

ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ ತಿಳಿಸಿರುತ್ತಾರೆ. (ಸದರಿ ಪತ್ರದ ಪ್ರತಿ ದೂರಿಗೆ ಲಗತ್ತಿಸಿರುತ್ತೇನೆ)

ರೂ. 5500/– ದಂಡ ಪಾವತಿಸುವ ನೋಟೀಸ್ ಸಂಬಂಧಿಸಿದಂತೆ ಪಂಚನಾಮೆ ಪ್ರತಿಯನ್ನು ನೀಡಲು ನಾನು ಮಾಹಿತಿ ಹಕ್ಕು ಅಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ಕೋರಿದಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ ರವರ ಪತ್ರ ಸಂಖ್ಯೆ: ಹೊನ್ನಾವರ/ಸಕಾನಿಇಂ(ವಿ)/ಸಲೆಅ/ಹಿಸ/2022–23/560, ದಿನಾಂಕ: 09.04.2022 ರಂದು ಪಂಚರ್ ಸಹಿ ಸಹ ಇಲ್ಲದ ಪರಿಶೀಲನಾ ವರದಿಯ ಛಾಯಾ ಪ್ರತಿಯನ್ನು ನೀಡಿರುತ್ತಾರೆ.

ಪರಿಶೀಲನಾ ವರದಿಯನ್ನು ಗಮನಿಸಿದಾಗ ಮಾಪಕವು ಉತ್ತಮವಾಗಿರುವದಾಗಿ ತಿಳಿಸಿರುತ್ತಾರೆ. ಮಾಪನದ ಕ್ರಮ ಸಂಖ್ಯೆ 3226604 ಎಂದು ನಮೂದಿಸಲಾಗಿದೆ. ಗಣಾಂಕವು 7949.9 ಎಂದು ನಮೂದಿಸಿರುತ್ತಾರೆ. ಈ ಹಿಂದೆ ನೀಡಿದ ಬಿಲ್ಲನ್ನು ಪರಿಶೀಲಿಸಿದಾಗ ದಿನಾಂಕ: 19.12.2021 ರಂದು ಪಾವತಿಸಬೇಕಾದ ಬಿಲ್ಲಿನಲ್ಲಿ ಗಣಾಂಕ 9580 ಎಂದು ನಮೂದಿಸಲ್ಪಟ್ಟಿರುತ್ತದೆ. (ಸ್ವಯಂ ದೃಢೀಕೃತ ಬಿಲ್ ಪ್ರತಿ ಲಗತ್ತಿಸಿದೆ.)

ನಂತರ ನಾನು ಮೀಟರನ್ನು ನೋಡಿದಾಗ ಈ ಬಗ್ಗೆ ನನಗೆ ಅರ್ಥ ಆಗಿರುವದಿಲ್ಲ. ನನ್ನ ಸ್ಥಾವರಕ್ಕೆ 10 ತಿಂಗಳಿನಿಂದ ಸಂಪರ್ಕ ಇಲ್ಲದೇ ದುರ್ಬಳಕೆ ಮಾಡಿದ್ದಾರೆಂದು ನೋಟೀಸ್ ನೀಡಿರುವದರಿಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ದಿನಾಂಕ: 04.04.2022 ರಂದು ಪತ್ರ ಬರೆದು ಈ ರೀತಿ ದಂಡ ವಿಧಿಸಿರುವದು ಸಂಪೂರ್ಣ ದುರುದ್ದೇಶಪೂರ್ವಕವಾಗಿದೆ ಎಂದು ಈ ಬಗ್ಗೆ ಪುನಃ ಪರಿಶೀಲನೆ ಮಾಡಲು ವಿನಂತಿಸಿರುತ್ತೇನೆ. ಆದರೆ ಅದಕ್ಕೂ ಸಹಿತ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ ರವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಅದಾದ ನಂತರ ದಿನಾಂಕ: 07.05.2022 ರಂದು ನಾನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ ರವರಿಗೆ ಭೇಟಿ ಮಾಡಿ ಪತ್ರ ದಿನಾಂಕ: 07.05.2022 ರಲ್ಲಿ ನಮೂದಿಸಿದ ಪಂಪ್‌ಗೆ ಅಳವಡಿಸಿದ ಲೈನ್ ರವರ ಮೀಟರ್ ನಂ–NIP-34220 ಪಂಪ್ ಸೆಟ್ ವಿದ್ಯುತ್ ಬಳಕೆ ಪ್ರಮಾಣ ಮೀಟರ್ ರೀಡಿಂಗ್, ಸ್ಥಾವರಕ್ಕೆ ಸಂಪರ್ಕ ಕಲ್ಪಿಸುವ ಲೈನ್ Estimate ಪ್ರಕಾರ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಪಂಚನಾಮೆ ಮಾಡಿಕೊಡುವಂತೆ ಹಾಗೂ ಮುಂದಿನ ಕಾನೂನು ಕ್ರಮಕ್ಕೆ ಅನುಕೂಲವಾಗುವಂತೆ ದೃಢೀಕೃತ ಪ್ರತಿಯನ್ನುನೀಡುವಂತೆ ಕೋರಿರುತ್ತೇವೆ. (ಪತ್ರದ ಪ್ರತಿ, Estimate ಪ್ರತಿ, ವಿದ್ಯುತ್ ಲೈನ್ ಸ್ಥಾಪಿಸಿದ ಸ್ವಯಂ ದೃಢೀಕೃತ ಪೋಟೋ ಪ್ರತಿ ದೂರಿಗೆ ಲಗ್ತ ಇದೆ.)

ಈ ಸಂದರ್ಭದಲ್ಲಿ ಹಾಲೀ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ ರವರು ಇದೇ ಕಛೇರಿಯಲ್ಲಿ ಶಾಖಾಧಿಕಾರಿ ಆಗಿ ಕಾರ್ಯನಿರ್ವಹಿಸುತ್ತಾ ಇದ್ದರು ಎಂದು ತಿಳಿಯ ಬಯಸುತ್ತೇನೆ.

ಅದಕ್ಕೂ ಸ್ವಲ್ಪ ದಿನಗಳ ಮುಂಚೆ ಈ ಅಧಿಕಾರಿ ವ್ಯಾಪ್ತಿಯಲ್ಲಿ ಸುಮಾರು 2009–10 ರಲ್ಲಿ ಶಾಖಾಧಿಕಾರಿ ಆಗಿ ಕಾರ್ಯನಿರ್ವಹಿಸುತ್ತಿರುವಾಗ ಈ ವಿದ್ಯುತ್ ಮಾರ್ಗವನ್ನು ನಮಗೆ ತೊಂದರೆ ಕೊಡದಂತೆ ಬದಲಾಯಿಸಲು ನಮ್ಮ ತಂದೆಯವರು ಮನವಿ ಕೊಟ್ಟಿದ್ದು ಇದೆ. ನಂತರ ಸದರಿ ಕಾರ್ಯ ವ್ಯಾಪ್ತಿಗೆ Feeder Manager ನ್ನು ನೇಮಕ ಮಾಡಲಾಯಿತು. ಸದರಿಯವರು ಸ್ಥಳಕ್ಕೆ ಹೋಗಿ ನನ್ನ ಹೆಂಡತಿಯ ಮೇಲೆ ಹಲ್ಲೆ ಮಾಡಿ ವಿದ್ಯುತ್ ಮಾರ್ಗವನ್ನು ತುಂಡರಿಸಿ ಒಂದು ಹೊಸ ಕಂಬವನ್ನು ಹುಗಿದು ನಮಗೆ ನಂತರ ಕೊಡುವಂತೆ ಲೈನನ್ನು ಎಳೆಯಲಾಯಿತು. ನಂತರ ಆ ಲೈನನ್ನು ತೆಗೆಯದಂತೆ ಹಿರಿಯ ಅಧಿಕಾರಿಗಳ ಗಮನವನ್ನು ದಾರಿ ತಪ್ಪಿಸಲು ಮಾಡಲು ನಮ್ಮ ಬಾಜುದಾರರಿಂದ ಸಿವಿಲ್ ದಾವೆಯನ್ನು ಪೈಲ್ ಮಾಡಿಸಿ ಅದರಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ ರವರು ಮೊದಲನೇ ಪಕ್ಷಗಾರರನ್ನಾಗಿ, ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ., ರವರನ್ನು 2 ನೇ ಪಕ್ಷಗಾರರನ್ನಾಗಿ ಅದರ ಜೊತೆಗೆ ನಮ್ಮ ತಂದೆಯವರು 3 ನೇ ಪಕ್ಷದಾರರನ್ನಾಗಿ ಹಾಗೂ ನನ್ನನ್ನು 4 ನೆ ಪಕ್ಷಗಾರರನ್ನಾಗಿ ಮಾಡಿ ದಾವೆ ಮಾಡಲಾಯಿತು. (ದಾವೆ ಸಂಖ್ಯೆ: 12/2014) ವಿಪರ್ಯಾಸ ಎಂದರೆ ಕ್ರಿಮಿನಲ್ ಪ್ರಕರಣದಲ್ಲಿ ಅಂದಿನ ಶಾಖಾಧಿಕಾರಿಗಳಾದ ಶ್ರೀ. ಪ್ರಕಾಶ ಹೆಗಡೆ ಯವರು ಆರೋಪಿಯಾಗಿದ್ದು ಆದರೆ ಸಿವಿಲ್ ಪ್ರಕರಣದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ ರವರನ್ನು ನಮ್ಮ ಪಕ್ಷಗಾರರನ್ನಾಗಿ ಮಾಡಿ ದಾವೆ ಸಂಖ್ಯೆ: 12/2014 ನ್ನು ದಾಖಲಿಸಿರುತ್ತಾರೆ.

ಆದರೆ ಕ್ರಿಮಿನಲ್ ಪ್ರಕರಣ ನಡೆಯುತ್ತಿದ್ದು ಈ ಪ್ರಕರಣದ ಸೇಡು ತಿರಿಸಿಕೊಳ್ಳಲು ಆಗಿನ ಶಾಖಾಧಿಕಾರಿ ಆಗಿದ್ದು ಈಗಿನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ಶ್ರೀ ರಾಮಕೃಷ್ಣ ಭಟ್ ರವರು ನನಗೆ ಉದ್ದೇಶಪೂರ್ವಕವಾಗಿ ತೊಂದರೆ ಕೊಡುತ್ತಿದ್ದಾರೆ ಈ ಎಲ್ಲಾ ತೊಂದರೆಗಳಿಗೆ ಸದರಿಯವರು ಕಾರಣಿಕರ್ತರಾಗಿದ್ದು ಆ ಉಪ-ವಿಭಾಗದಲ್ಲಿ ಸ್ಥಳೀಯರಾಗಿರುತ್ತಾರೆ.

ದಿನಾಂಕ: 28.12.2017 ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರು ವಿದ್ಯುತ್ ಮಂಜೂರಾತಿ ಪತ್ರದ ಕೆಳಗೆ Initial Reading 7915.8 ಎಂದು ದಾಖಲಿಸಿರುತ್ತಾರೆ. ಹಾಗೂ ಶ್ರೀಮತಿ. ಮೃದುಲಾ ಗಣೇಶ ಹೆಗಡೆ ನೀಲಕೋಡ, ಹೊನ್ನಾವರ ರವರ ಮಾಹಿತಿಗಳನ್ನು ಪಡೆದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರ ಪತ್ರ ಸಂಖ್ಯೆ: ಹೊನ್ನಾವರ/ಸಕಾನಿಇಂ(ವಿ)/ಸಲೆಅ/ಹಿಸ/2022-23/8577, ದಿನಾಂಕ: 28.10.2022 ರ ದಾಖಲೆಯಲ್ಲಿ ತಿಂಗಳುವಾರು ಗಣಾಂಕದ ಮಾಹಿತಿಯನ್ನು ಹಾಜರ ಪಡಿಸಿರುತ್ತೇನೆ.

ಸ್ಥಾವರ ಸಂಖ್ಯೆ: NIP-34220 ನೀರಾವರಿ ಪಂಪ್ ಸೆಟ್ ಕಳೆದ ಎಂಟು ದಿನಗಳಿಂದ ವಿದ್ಯುತ್ ಸಂಪರ್ಕ ಚಾಲು ಸ್ಥಿತಿಯಲ್ಲಿ ಇರುತ್ತದೆ. ಅದೇ ರೀತಿ NIP-23 ನೀರಾವರಿ ಪಂಪ್ ಸೆಟ್ ಸ್ಥಾವರವೂ ಸಹ ಚಾಲು ಸ್ಥಿತಿಯಲ್ಲಿದೆ.

NL-68 ಗೃಹ ಬಳಕೆ ಸ್ಥಾವರವಾಗಿದ್ದು ಸದರಿ ಮನೆಯಲ್ಲಿ ನನ್ನ ತಾಯಿಯವರು ವಾಸವಾಗಿದ್ದರು. ಆದರೆ ಸದರಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಇರುವದಿಲ್ಲ.

ಸ್ಥಾವರ ಸಂಖ್ಯೆ: NL-35 ಗೃಹ ಬಳಕೆ ಸ್ಥಾವರವಾಗಿದ್ದು ವಿದ್ಯುತ್ ಸಂಪರ್ಕ ಇರುವದಿಲ್ಲ.

ಈ ಮೇಲಿನ ವಿವರವನ್ನು ನೀಡುತ್ತಾ ನನ್ನ ಬೇಡಿಕೆ ಈ ಕೆಳಗಿನಂತಿದೆ ಆದೇಶಿಸಲು ಪ್ರಾರ್ಥಿಸುತ್ತೇನೆ.

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರು ನೀಡಿದ ರೂ.5500/- ದಂಡ & ತಕರಾರು ನೀಡಿದ ನೋಟೀಸ್ ರದ್ದು ಮಾಡಲು ಕೋರುತ್ತೇನೆ.
2. NIP-34220, NIP-23, NL-68 ವಿದ್ಯುತ್ ಸಂಪರ್ಕವು ನಮ್ಮ ತಂದೆಯವರ ಕಾಲದಲ್ಲಿ ಹೇಗಿತ್ತೊ ಆ ಪ್ರಕಾರ ನೀಡಲು ಮನವಿ.
3. ಕಳೆದ 10 ತಿಂಗಳಿಂದ ನನ್ನ ತೋಟಕ್ಕೆ ಉಂಟಾದ ನಷ್ಟವನ್ನು ತಾವು ಪರಿಶೀಲಿಸಿ ಸೂಕ್ತ ಪರಿಹಾರವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರರವರಿಂದ ಕೊಡಿಸಲು ಮನವಿ.
4. ವಿದ್ಯುತ್ ದುರ್ಬಳಕೆ ಎಂದು ನಮೂದಿಸಿ ಸಿ.ಜಿ.ಆರ್.ಎಫ್ ಅಧಿಕಾರ ವ್ಯಾಪ್ತಿಯಿಂದ ಈ ಪ್ರಕರಣ ಹೊರತರಲು ಯತ್ನಿಸುತ್ತಿರುವುದನ್ನು ಪರಿಗಣಿಸಬಾರದು. (Section 125, 135 ಇತ್ಯಾದಿ ಬಳಕೆ ಉದ್ದೇಶಪೂರ್ವಕ)
5. ವಿದ್ಯುತ್ ಮಾರ್ಗವನ್ನು Estimate ನಲ್ಲಿರುವಂತೆ ಯಾವುದೇ ಅಪಾಯವಾಗದಂತೆ ಪುನಃ ಸ್ಥಾಪಿಸಿ ನಿರ್ಮಾಣ ಮಾಡಿಕೊಡುವಂತೆ ಮನವಿ."

ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾ ಮತ್ತು ಪಾ ಉಪ-ವಿಭಾಗ, ಹೆಸ್ಕಾಂ.,ಹೊನ್ನಾವರ ರವರು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯ ಸಭೆಯಲ್ಲಿ ದಿನಾಂಕ 29.11.2022 ರಂದು ಈ ಕೆಳಗಿನಂತೆ ಹೇಳಿಕೆಯನ್ನು ನೀಡಿರುತ್ತಾರೆ.

"ಶ್ರೀ. ರಾಮಕೃಷ್ಣ ಭಟ್, ವಯಸ್ಸು-43 ವರ್ಷ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ಪ್ರಕರಣಕ್ಕೆ ಸಂಬಂಧಿಸಿದ ಹೇಳಿಕೆ.

*ಅರ್ಜಿದಾರರಾದ ಶ್ರೀ ಗಣೇಶ ಪರಮೇಶ್ವರ ಹೆಗಡೆ ರವರು ದಿನಾಂಕ: 04.11.2021 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಹೆಸ್ಕಾಂ, ಹೊನ್ನಾವರ ಕಛೇರಿಗೆ ದೂರನ್ನು ನೀಡಿ* **NIP-23 & NIP-34220** *ಕ್ಕೆ ವಿದ್ಯುತ್ ಸಂಪರ್ಕ ನೀಡುವ ಲೈನನ್ನು ಮೊದಲಿನಂತೆಯೇ ಸರಿಪಡಿಸಿ ವಿದ್ಯುತ್ ಸರಿಯಾಗಿ ಮೂರು ಫೇಸ್ ಲೈನ್ ನೀಡಲು ಕೋರಿರುತ್ತಾರೆ. ಅದರಂತೆಯೇ ದಿನಾಂಕ: 18.11.2022ರಂದು ಸ್ಥಳಕ್ಕೆ ಮಾರ್ಗದಾಳು ಆದ ಶ್ರೀ ಶಂಕರ ನಾಯ್ಕ ರವರು ಸದರೀ ಸ್ಥಳಕ್ಕೆ ಹೋಗಿ ನೋಡಿದಾಗ ಸದರೀ ಪಂಪಸೆಟ್‌ನಿಂದಲೇ ಶ್ರೀ ಗಣೇಶ ಪರಮೇಶ್ವರ ಹೆಗಡೆರವರು ಹೊಸದಾಗಿ ಕಟ್ಟುತ್ತಿರುವ ಮನೆಗೆ ನೀರು ಹಾಯಿಸುತ್ತಿರುವುದಾಗಿ ತಿಳಿಸಿದ್ದು ಇರುತ್ತದೆ. ಅದರಂತೆ ಈ ಬಗ್ಗೆ ಶಾಖಾಧಿಕಾರಿ ಹೆಸ್ಕಾಂ ಹೊನ್ನಾವರ ಗ್ರಾಮೀಣ ಶಾಖೆ ರವರನ್ನು ವಿಚಾರಿಸಲಾಗಿ, ಸದರೀ ಗ್ರಾಹಕರ ನೀರಾವರಿ ಪಂಪುಸೆಟ್‌ಗೆ ಹೋದ ವಿದ್ಯುತ್ ಮಾರ್ಗವನ್ನು 2010 ನೇ ಸಾಲಿನಲ್ಲಿ ಪಕ್ಕದಲ್ಲಿಯೇ ಇರುವ ಶ್ರೀ ಕಾಶಿನಾಥ ಭಾಗ್ವತರವರು ಸ್ವಯಂ ಕಾರ್ಯಗತ ಯೋಜನೆಯಲ್ಲಿ ಸ್ಥಳಾಂತರಿಸಿರುವುದಾಗಿ ಹಾಗೂ ಶ್ರೀ ಗಣೇಶ ಪರಮೇಶ್ವರ ಹೆಗಡೆಯವರ ಪತ್ನಿ ಮೃದುಲಾ ಗಣೇಶ ಹೆಗಡೆ ಇವರು ಹೆಸ್ಕಾಂ ಅಧಿಕಾರಿ ಹಾಗೂ ಗುತ್ತಿಗೆದಾರರ ವಿರುದ್ಧ ಹಲ್ಲೆ ನಡೆಸಿದ ದೂರು ಸಲ್ಲಿಸಿದ್ದು ಸದರಿ ದೂರು ಇಲ್ಲಿಯವರೆಗೆ ಇತ್ಯರ್ಥ ಆಗಿರುವುದಿಲ್ಲ. ಹಾಗೂ ನಾವು ಈ ಬಗ್ಗೆ ಮಹಜರ ಮಾಡಿದಲ್ಲಿ ಕಾನೂನು ಉಪನ್ಯಾಸರಕರಾದ ಶ್ರೀ ಗಣೇಶ ಪರಮೇಶ್ವರ ಹೆಗಡೆ ಇವರು ಇಲ್ಲಸಲ್ಲದ ಆರೋಪ ಮಾಡಿ ವೃಥಾ ತೊಂದರೆ ಕೊಡಬಹುದಾದ ಸಾಧ್ಯತೆ ಇದ್ದು, ಸದರಿ ಸ್ಥಳ ಪರಿಶೀಲನೆಯನ್ನು ಜಾಗೃತದಳವರಿಗೆ ವಹಿಸುವುದು ಸೂಕ್ತ ಎಂದು ತಿಳಿಸಿರುತ್ತಾರೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಜಾಗೃತದಳ, ಕಾರವಾರರವರಿಗೆ ಸದರೀ ಸ್ಥಳ ಪರಿಶೀಲಿಸಲು ತಿಳಿಸಿದಾಗ ದಿನಾಂಕ: 19.01.2022ರಂದು ಶ್ರೀ ಗಣೇಶ ಪರಮೇಶ್ವರ ಹೆಗಡೆಯವರ ಜಾಗವನ್ನು ಪರಿಶೀಲಿಸಿ* **NIP-34220** *ರ ನೀರಾವರಿ ಪಂಪ್‌ನಿಂದ ಮನೆಕಟ್ಟಲು ಬಳಸುತ್ತಿರುವುದನ್ನು ಗಮನಿಸಿ ಜಕಾತಿ ದುರುಪಯೋಗದ ಮಹಜರು ವರದಿ ನೀಡಿರುತ್ತಾರೆ. ಇದರಿಂದ* **NIP-34220** *ಕ್ಕೆ ವಿದ್ಯುತ್ ಸಂಪರ್ಕ ಇರುವುದು ಖಚಿತವಾಗಿರುತ್ತದೆ.*

*ಅಲ್ಲದೇ ಶ್ರೀ ಗಣೇಶ ಪರಮೇಶ್ವರ ಹೆಗಡೆಯವರು ದಿನಾಂಕ: 04.11.2022 ರಂದು ಈ ಕಚೇರಿಯಲ್ಲಿ ನೀಡಿದ ದೂರಿನಲ್ಲಿ "ಶ್ರೀ ಕಾಶಿನಾಥ ಗೋವಿಂದ ಭಾಗ್ವತರವರು* **NIP-23 & NL-68** *ಕ್ಕೆ ಸಂಪರ್ಕ ಕಲ್ಪಿಸುವ ಸ.ನಂ.: 81/2ರಲ್ಲಿ ಹಾದು ಹೋಗುವ ವಿದ್ಯುತ್ ಲೈನ್ ಕಂಬವನ್ನು 2014 ನೇ ವರ್ಷದಲ್ಲಿ ಸ್ವತಃ ಮುರಿದುಕೊಂಡು ಸದರಿಯವರ ವಿರುದ್ದ ದೂರು ದಾಖಲಿಸಿ ಸುಳ್ಳು ಅಭಿಯೋಜನೆಯನ್ನು ನ್ಯಾಯಾಲಯದಲ್ಲಿ ಮಾಡಿರುತ್ತಾನೆ. ನ್ಯಾಯಾಲಯವು ಪ್ರಕರಣ ವಜಾಗೊಳಿಸಿ, ಸದರಿಯವರನ್ನು ನಿರ್ದೋಷಿ ಎಂದು ಸಾರಿದೆ ಎಂದು ತಿಳಿಸಿರುತ್ತಾರೆ." ಆದರೆ ಈ ಬಗ್ಗೆ ಪರಿಶೀಲಿಸಿದಾಗ ಶ್ರೀ ಗಣೇಶ ಪರಮೇಶ್ವರ ಹೆಗಡೆಯವರ ತಂದೆಯು ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ಈ ಕಛೇರಿಯ ಹಾಗೂ ಶ್ರೀ ಕಾಶಿನಾಥ ಗೋವಿಂದ ಭಾಗ್ವತ ವಿರುದ್ದ ದೂರು ದಾಖಲಿಸಿದ್ದು ಜಿಲ್ಲಾ ಗ್ರಾಹಕರ ವೇದಿಕೆಯ ಸದರಿ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಹಾಗೂ ಶ್ರೀ ಗಣೇಶ ಪರಮೇಶ್ವರ ಹೆಗಡೆಯವರ ತಂದೆಯು ಈ ಬಗ್ಗೆ ರಾಜ್ಯ ಗ್ರಾಹಕರ ಕುಂದುಕೊರತೆಯ ವೇದಿಕೆಯಲ್ಲೂ ಅರ್ಜಿ ಸಲ್ಲಿಸಿದ್ದು, ಅಲ್ಲಿಯೂ ಸದರಿಯವರ ಅರ್ಜಿಯನ್ನು ಗ್ರಾಹಕರ ಕುಂದುಕೊರತೆ ವೇದಿಕೆ ವಜಾಗೊಳಿಸಿರುತ್ತದೆ. (ಸಿ.ಸಿ.ನಂ: 137/2010 ಹಾಗೂ ಅಪೀಲ್ ನಂ: 2220/2011 ರ ಪ್ರತಿಯನ್ನು ಅನುಬಂಧ–1 ಹಾಗೂ ಅನುಬಂಧ–2 ಎಂದು ಲಗತ್ತಿಸಿದೆ.)*

*ಗ್ರಾಹಕರಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಹೆಸ್ಕಾಂ, ಹೊನ್ನಾವರರವರ ಕಛೇರಿಯಿಂದ ಕ್ರಮಾಂಕ: ಹೊನ್ನಾವರ/ಸ.ಕಾ.ನಿ.ಇಂ(ವಿ)/ಕಂದಾಯ–14481 ದಿನಾಂಕ: 24.03.2022 ರಂದು ಪತ್ರ ಬರೆದು ಜಾಗೃತದಳದವರು ಕಂಡು ಹಿಡಿದ ಹಿಂಬಾಕಿ ಮೊತ್ತ ರೂ. 5500/– ನ್ನು ಪಾವತಿಸಲು ಸೂಚಿಸಲಾಗಿತ್ತು. ಒಂದು ವೇಳೆ ಗ್ರಾಹಕರ ಆಕ್ಷೇಪಣೆ ಇದ್ದಲ್ಲಿ 15 ದಿವಸಗಳ ಒಳಗಾಗಿ ಹಿಂದಾಕರಣೆ ಮೊತ್ತದ ಶೇಕಡಾ 50 ರಷ್ಟು ಹಣ ಪಾವತಿ ಮಾಡಲು ತಿಳಿಸಲಾಗಿತ್ತು. ಆದರೆ ಗ್ರಾಹಕರು ಈ ಬಗ್ಗೆ ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ನೇರವಾಗಿ ದಿನಾಂಕ 14.10.2022 ರಂದು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ ಅರ್ಜಿ ಸಲ್ಲಿಸಿರುತ್ತಾರೆ.*

1. ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ ನೀಡುವ ದೂರಿನ ಬಗ್ಗೆ ಈ ರೀತಿ ವ್ಯಾಖ್ಯಾನಿಸಿರುತ್ತಾರೆ.

> ***Complaint means any grievance made by the consumer regarding supply of electricity by the licensee other than unauthorized electric supply under 126, offence and penalties under section 135 to 139 and accident in the distribution supply or use of electricity under section 161 of the act.***

*ಶ್ರೀ ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ।। ಹೊನ್ನಾವರರರವರು, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಹೆಸ್ಕಾಂ, ಹೊನ್ನಾವರ ಇವರ ವಿರುದ್ಧ ವಿದ್ಯುತ್ ದುರ್ಬಳಕೆ ಮಾಡದಿದ್ದರೂ LT-4 ರಿಂದ LT-7 ಕ್ಕೆ ಬಳಕೆ ಮಾಡಿದ್ದಾರೆಂದು ಸುಳ್ಳು ಆರೋಪ ಮಾಡಿ ವಿನಾಕಾರಣ ಹಳೇ ದ್ವೇಷದಿಂದ 5500–00 ರೂಪಾಯಿ ದಂಡ ವಿಧಿಸಿರುವುದರ ವಿರುದ್ಧ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ ದೂರು ಸಲ್ಲಿಸಿದ್ದು (ಪ್ರಕರಣ ಸಂಖ್ಯೆ 35/14.10.2022) ಸದರೀ ಪ್ರಕರಣವು ದಿ: 14.10.2022 ರಂದು ದಾಖಲಾಗಿರುತ್ತದೆ. ಗ್ರಾಹಕರಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಹೆಸ್ಕಾಂ, ಹೊನ್ನಾವರರವರ ಕಛೇರಿಯಿಂದ ಕ್ರಮಾಂಕ: ಹೊನ್ನಾವರ/ಸ.ಕಾ.ನಿ.ಇಂ(ವಿ)/ಕಂದಾಯ–14481 ದಿನಾಂಕ: 24.03.2022 ರಂದು ಪತ್ರ ಬರೆದು ಜಾಗೃತದಳದವರು ಕಂಡು ಹಿಡಿದ ಹಿಂಬಾಕಿ ಮೊತ್ತ ರೂ. 5500/– ನ್ನು ಪಾವತಿಸಲು ಸೂಚಿಸಲಾಗಿತ್ತು ಅದರೇ ಗ್ರಾಹಕರು ದಂಡದ ಮೊತ್ತದ ಶೇ 50 ನ್ನು ಪಾವತಿಸದೇ ನೇರವಾಗಿ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ ಅರ್ಜಿ ಸಲ್ಲಿಸಿರುತ್ತಾರೆ. ನಿಯಮಾನುಸಾರ ಸದರಿ ದೂರು ಸ್ವೀಕಾರ್ಹವಾಗಿರುವುದಿಲ್ಲ ಈ ಬಗ್ಗೆ ಕೆ.ಇ.ಆರ್.ಸಿ ಒಂಬಡ್ಸಮನ್ ಆದೇಶಿಸಿದ ಆದೇಶ ಸಂಖ್ಯೆ: OMB/B/G-435/2021, OMB/B/G-429/2021 & OMB/B/G-297/2018 ಆದೇಶವನ್ನು ತಮ್ಮ ಅವಗಾಹನೆಗಾಗಿ ಅನುಬಂಧ–3, ಅನುಬಂಧ–4 ಹಾಗೂ ಅನುಬಂಧ–5 ಎಂದು ಲಗತ್ತಿಸಿದೆ. ಅಲ್ಲದೇ ಗ್ರಾಹಕರು 04.04.2022 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರ ಕಚೇರಿಗೆ ಪತ್ರ ಬರೆದು ದಂಡ ವಿಧಿಸಿರುವದು ಸಂಪೂರ್ಣ ದುರುದ್ದೇಶಪೂರ್ವಕವಾಗಿದೆ ಎಂದು ಈ ಬಗ್ಗೆ ಪರಿಶೀಲನೆ ಮಾಡಲು ವಿನಂತಿಸಿರುತ್ತೇನೆ ಎಂದು ಹೇಳಿಕೆ ನೀಡಿದ್ದು ಇರುತ್ತದೆ. ಆದರೆ ನಿಯಮಾನುಸಾರ ಗ್ರಾಹಕರ ಕುಂದು ಕೊರತೆಯ ನಿವಾರಣಾ ವೇದಿಕೆಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರ ಕಛೇರಿಗೆ ಬರೆದ ಪತ್ರದ 3 ತಿಂಗಳ ಒಳಗಾಗಿ ಗ್ರಾಹಕರು ದೂರು ನೀಡಬೇಕಾಗಿತ್ತು. ಆದರೆ ದಿನಾಂಕ: 14.10.2022 ರಂದು ಅಂದರೆ 6 ತಿಂಗಳ 10 ದಿವಸದ ನಂತರ ದೂರನ್ನು (3 ತಿಂಗಳು 10 ದಿವಸ ವಿಳಂಬವಾಗಿ) ನೀಡಿರುತ್ತಾರೆ.*

*KERC (Consumer Grievance Redressal Forum and Ombudsman) (Second Amendment) Regulations, 2013 Clause No. 6.1 ರ ಪರಿಷ್ಕೃತ ಆದೇಶದಂತೆ 03 ತಿಂಗಳೊಳಗಾಗಿ ಸಲ್ಲಿಸಬೇಕಾದ ದೂರನ್ನು 06 ತಿಂಗಳ 10 ದಿವಸದ ನಂತರ ನೋಂದಾಯಿಸಿರುವದರಿಂದ (3 ತಿಂಗಳು 10 ದಿವಸ ವಿಳಂಬವಾಗಿ) ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯು ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ।। ಹೊನ್ನಾವರರರವರ ದೂರನ್ನು ವಜಾಗೊಳಿಸಬಹುದಾಗಿರುತ್ತದೆ.*

2. ಅಧಿಕಾರಿಗಳಿಂದ ಆದ ಉಪದ್ರವದಿಂದ ಉಂಟಾದ ಒಂದು ಲಕ್ಷ ರೂಪಾಯಿ ಲುಕ್ಷಾಣ ಮರುಬರಿಕೆ ಮಾಡಿಕೊಡಲು ಪರಿಹಾರ ಸ್ವರೂಪವಾಗಿ ಗ್ರಾಹಕರು ಕೋರಿರುವ ಬಗ್ಗೆ:

*ಗ್ರಾಹಕರು NIP-34220 ಕ್ಕೆ ವಿದ್ಯುತ್ 09.01.2018 ರಂದು ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದು ಸದರೀ ನೀರಾವರಿ ಪಂಪ್ ಸೆಟ್ ಮೂಲಕ ನೀರು ಹಾಯಿಸಿ ಮನೆಯನ್ನು ಕಟ್ಟುತ್ತಿರುವದನ್ನು ಜಾಗ್ರತದಳ ಅಧಿಕಾರಿಗಳ ಪರಿಶೀಲನೆ ಮಾಡಿದ್ದು ಸದರಿಯವರು ವಿಧಿಸಿದ ದಂಡವು ಸಮಂಜಸವಾಗಿರುವುದನ್ನು ಗಮನಿಸಿ ಗ್ರಾಹಕಿರಿಗೆ ನೋಟಿಸ್ ನೀಡಲಾಗಿದೆ. ಗ್ರಾಹಕರು ಸದರೀ ನೋಟಿಸ್‌ನಲ್ಲಿರುವಂತೆ ದಂಡದ ಮೊತ್ತದ ಶೇ. 50 ನ್ನು ಪಾವತಿಸದೇ ಇರುವುದರಿಂದ ವಸೂಲಾತಿಗೆ ಕ್ರಮಕೈಗೊಳ್ಳಲಾಗಿರುತ್ತದೆ ವಿನಃ ಯಾವುದೇ ಅಧಿಕಾರಿಗಳಿಂದ ಸದರೀ ಗ್ರಾಹಕರಿಗೆ ಉಪದ್ರವ ಉಂಟಾಗಿರುವುದಿಲ್ಲ.*

2009–10ನೇ ಸಾಲಿನಲ್ಲಿ ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರು ರಾಮಕೃಷ್ಣ ಭಟ್ ಆದ ನಾನು ಶಾಖಾಧಿಕಾರಿ ಯಾಗಿರುತ್ತೇನೆಂದು ತಿಳಿಸಿರುತ್ತಾರೆ. ಇದು ಸತ್ಯಕ್ಕೆ ದೂರವಾಗಿರುತ್ತದೆ. ಸಾಲ್ಕೋಡ ಫೀಡರ್ ಮ್ಯಾನೇಜರ್ ಎಂದು ಶ್ರೀ. ಆನಂದ ರಾವ್ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ), ಶಿರಸಿ ರವರು 2008 ನೇ ಸಾಲಿನಲ್ಲಿಯೇ ಅಧಿಕೃತ ಜ್ಞಾಪನಾ ಪತ್ರವನ್ನು ಅಲ್ಲದೇ 2019 ರಲ್ಲಿ ನಾನು ಶ್ರೀ ಕಾಶಿನಾಥ ಗೋವಿಂದ ಭಾಗ್ವತ ರವರ ಜೊತೆಗೂಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ–ವಿಭಾಗ, ಹೆಸ್ಕಾಂ, ಹೊನ್ನಾವರ ರವರನ್ನೇ ಮೊದಲನೇ ಪ್ರತಿವಾದಿಯನ್ನಾಗಿ ಮಾಡಿ, ವ್ಯವಸ್ಥಾಪಕ ನಿರ್ದೇಶಕರು ಹೆಸ್ಕಾಂ., ರವರನ್ನು ಎರಡನೇ ಪ್ರತಿವಾದಿಯನ್ನಾಗಿ ಮಾಡಿ, ದೇವಕಿ ಪರಮೇಶ್ವರ ಹೆಗಡೆ ರವರನ್ನು ಮೂರನೇ ಪ್ರತಿವಾದಿಯನ್ನಾಗಿ ಮಾಡಿ, ಸುಧಾ ಪ್ರದೀಪ ಹೆಗಡೆ ರವರನ್ನು ನಾಲ್ಕನೇ ಪ್ರತಿವಾದಿಯನ್ನಾಗಿ ಮಾಡಿ, ಗಣೇಶ ಪರಮೇಶ್ವರ ಹೆಗಡೆ ರವರನ್ನು ಐದನೇ ಪ್ರತಿವಾದಿಯನ್ನಾಗಿ ಮಾಡಿ ಹೊನ್ನಾವರ ಜೆ.ಎಮ್.ಎಫ್.ಸಿ ನ್ಯಾಯಾಲಯದಲ್ಲಿ ಸಿವಿಲ್ ದೂರನ್ನು ಮಾಡಿರುತ್ತಾರೆಂದು ತಿಳಿಸಿರುವದು ಸಹ ಸತ್ಯಕ್ಕೆ ದೂರವಿರುತ್ತದೆ. ಏಕೆಂದರೆ ನಾನು 2019 ನೇ ಸಾಲಿನಲ್ಲಿ ಹೊನ್ನಾವರ ಹೆಸ್ಕಾಂ., ಕಛೇರಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆಗಿ ಸೇವೆ ಸಲ್ಲಿಸುತ್ತಲೇ ಇರಲಿಲ್ಲ. ನಾನು ಹೊನ್ನಾವರ ಉಪ–ವಿಭಾಗದಲ್ಲಿ ದಿನಾಂಕ: 03.10.2020 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆಗಿ ವರದಿ ಮಾಡಿಕೊಂಡಿದ್ದು ಇರುತ್ತದೆ.

3. NIP-34220 ಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮನವಿ ನೀಡಿದ ಬಗ್ಗೆ:

ಗ್ರಾಹಕರು NIP-23 & NIP-34220 ಕ್ಕೆ ವಿದ್ಯುತ್ ಸಂಪರ್ಕವನ್ನು ಈಗಲೂ ಹೊಂದಿದ್ದು ಅರ್ಜಿದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರು ದಿನಾಂಕ: 04.11.2021 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಹೆಸ್ಕಾಂ, ಹೊನ್ನಾವರ ಕಛೇರಿಗೆ ದೂರನ್ನು ನೀಡಿ ಈ ಮೊದಲು NIP-23 ಕ್ಕೆ ವಿದ್ಯುತ್ ಸಂಪರ್ಕ ನೀಡುವ ಲೈನನ್ನು ಮೊದಲಿನಂತೆಯೇ ಸರಿಪಡಿಸಿ ವಿದ್ಯುತ್ ಸರಿಯಾಗಿ ಮೂರು ಫೇಸ್ ಲೈನ್ ನೀಡಲು ಕೋರಿರುತ್ತಾರೆ. ಈ ಹಿಂದೆ ಸದರೀ ಮಾರ್ಗವು ಶ್ರೀ ಕಾಶೀನಾಥ ಭಾಗ್ವತ್ ರವರ ಜಾಗದಲ್ಲಿ ಹಾದುಹೋಗಿದ್ದು ಸದರೀ ಮಾರ್ಗವನ್ನು ಶ್ರೀ ಕಾಶೀನಾಥ ಭಾಗ್ವತ್ ರವರು ಸ್ವಯಂಕಾರ್ಯಗತ ಯೋಜನೆಯಲ್ಲಿ ಸ್ಥಳಾಂತರ ಮಾಡುವಾಗ ಹಾಗೂ ಶ್ರೀ ಗಣೇಶ ಪರಮೇಶ್ವರ ಹೆಗಡೆಯವರ ಪತ್ನಿ ಮೃದುಲಾ ಗಣೇಶ ಹೆಗಡೆ ಇವರು ಹೆಸ್ಕಾಂ ಅಧಿಕಾರಿ ಹಾಗೂ ಗುತ್ತಿಗೆದಾರರ ವಿರುದ್ಧ ಹಲ್ಲೆಯ ದೂರು ದಾಖಲಿಸಿದ್ದು, ಸದರಿ ದೂರನ್ನು ಹೊನ್ನಾವರ ಜೆ.ಎಮ್.ಎಫ್.ಸಿ ನ್ಯಾಯಾಲಯ ವಜಾ ಮಾಡಿದ್ದರೂ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ಪತ್ನಿ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಅಪೀಲ ಮಾಡಿಕೊಂಡಿದ್ದು ಇರುತ್ತದೆ ಸದರಿ ದೂರು ನ್ಯಾಯಾಲಯದಲ್ಲಿ ಇಲ್ಲಿಯವರೆಗೆ ಇತ್ಯರ್ಥ ಆಗಿರುವುದಿಲ್ಲ. ಅಲ್ಲದೇ ಗ್ರಾಹಕರು NIP-34220 ಕ್ಕೆ ವಿದ್ಯುತ್ 09.01.2018 ರಂದು ವಿದ್ಯುತ್ ಸಂಪರ್ಕ ಈಗಿರುವ 10ಎಂಎಂ ಸರ್ವೀಸ್ ಮುಖಾಂತರವೇ ಪಡೆದು ಕೊಂಡಿರುತ್ತಾರೆ. ಅಲ್ಲದೇ ಸದರೀ ಪಂಪಸೆಟ್‌ಗೆ ತೆರೆದ ಬಾವಿ ಎಂದು ನಮೂದಿಸಿ ಕೊಳವೆ ಬಾವಿಗೆ ಪಂಪನ್ನು ಅಳವಡಿಸಿಕೊಂಡಿದ್ದು ಇರುತ್ತದೆ. ಮುಖ್ಯವಾಗಿ ಶ್ರೀ ಕಾಶಿನಾಥ ಗೋವಿಂದ ಭಾಗ್ವತ ರವರು ಹಾಲಿ ಇರುವ ಲೈನ್ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಸ್ಕಾಂ, ಉಪ–ವಿಭಾಗ, ಹೊನ್ನಾವರ ಮೊದಲನೇ ಪ್ರತಿವಾದಿಯಾಗಿ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ, ಹುಬ್ಬಳ್ಳಿರವರನ್ನು ಎರಡನೇ ಪ್ರತಿವಾದಿಯಾಗಿ ಹೊನ್ನಾವರ ಸಿವಿಲ್ ನ್ಯಾಯಾಲಯದಲ್ಲಿ ದೂರು ದಾಖಲಿಸಿರುತ್ತಾರೆ. ಆದರೆ ನ್ಯಾಯಾಲಯದಲ್ಲಿ ಇಲ್ಲಿಯವರೆಗೂ ಸದರೀ ದಾವೆಯು ಇತ್ಯರ್ಥವಾಗಿರುವುದಿಲ್ಲ. ಆರ್‌ಎ/5/2019 ಹೊನ್ನಾವರದ ಸಿವಿಲ್ ನ್ಯಾಯಾಲಯದ ಆರ್ಡರ್ ಶೀಟನ್ನು ಮಾನ್ಯರ ಗಮನಕ್ಕಾಗಿ ಅನುಬಂಧ–6 ಎಂದು ಈ ಪತ್ರದೊಂದಿಗೆ ಲಗತ್ತಿಸಿದೆ. ಸದರೀ ದಾವೆಯ ಬಗ್ಗೆ ಕಂಪನಿಯ ವಕೀಲರ ಕಾನೂನು ಸಲಹೆಯನ್ನು ಪಡೆದಿದ್ದು ಕಂಪನಿಯ ವಕೀಲರು ದಾವೆಯು ಇತ್ಯರ್ಥವಾಗುವವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳಲು ತಿಳಿಸಿರುತ್ತಾರೆ. ಸದರೀ ಕಾನೂನು ಸಲಹೆಯ ಪ್ರತಿಯನ್ನು ಅನುಬಂಧ–7 ಎಂದು ಲಗತ್ತಿಸಿದೆ.

4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಹೆಸ್ಕಾಂ, ಹೊನ್ನಾವರ ರದ್ದುಪಡಿಸುವ ಬಗ್ಗೆ ಮನವಿ:

ಗ್ರಾಹಕರಿಗೆ ಕ್ರಮಾಂಕ: ಹೊನ್ನಾವರ/ ಸ.ಕಾ.ನಿ.ಇಂ(ವಿ)/ ಕಂದಾಯ–14481, ದಿನಾಂಕ: 24.03.2022 ರಂದು ಪತ್ರ ಬರೆದು ಜಾಗೃತದಳದವರು ಕಂಡು ಹಿಡಿದ ಹಿಂಬಾಕಿ ಮೊತ್ತ ರೂ. 5500/– ನ್ನು ಪಾವತಿಸಲು ಈಗಾಗಲೇ ತಿಳಿಸಲಾಗಿದ್ದು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯ ತೀರ್ಪಿನಂತೆ ಮುಂದಿನ ಕ್ರಮಕ್ಕೈಗೊಳ್ಳಲಾಗುವುದು.

5. *ಉಪದ್ರವ ನೀಡಿದ ಅಧಿಕಾರಿಗಳ ವಿರುದ್ದ ಶಿಸ್ತು ಕ್ರಮಕ್ಕೆ ಮನವಿ:*

*ಸದರೀ ವಿಷಯವು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಅಧೀಕೃತ ಶಿಸ್ತು ಪ್ರಾಧಿಕಾರಕ್ಕೆ ಸಂಬಂಧ ಪಟ್ಟಿರುತ್ತದೆ. ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಪರಿಗಣಿಸಿ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯು ಹಾಗೂ ಮಾನ್ಯ ಕೆ.ಇ.ಆರ್.ಸಿ ಒಂಬಡ್ಸಮನ್ ರವರ ಅದೇಶವನ್ನು ಪರಿಶೀಲಿಸಿ ಶ್ರೀ ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ।। ಹೊನ್ನಾವರರರವರು, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಹೆಸ್ಕಾಂ, ಹೊನ್ನಾವರ ಇವರ ವಿರುದ್ದ ವಿದ್ಯುತ್ ದುರ್ಬಳಕೆ ಮಾಡದಿದ್ದರೂ LT-4 ರಿಂದ LT-7 ಕ್ಕೆ ಬಳಕೆ ಮಾಡಿದ್ದಾರೆಂದು ಸುಳ್ಳು ಆರೋಪ ಮಾಡಿ ವಿನಾಕಾರಣ ಹಳೇ ದ್ವೇಷದಿಂದ 5500–00 ರೂಪಾಯಿ ದಂಡ ವಿಧಿಸಿರುವುದರ ವಿರುಧ್ಧ ಮತ್ತು ಕೃಷಿ ಪಂಪಿನ ಲೈನ್ ತಪ್ಪಿಸಿ ಒಂದು ಲಕ್ಷ ರೂಪಾಯಿ ಲುಕ್ಸಾನು ಮಾಡಿದ್ದರ ವಿರುದ್ದ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ ನೀಡಿದ ದೂರನ್ನು (ಪ್ರಕರಣ ಸಂಖ್ಯೆ 35/14.10.2022) ವಜಾ ಮಾಡಲು ವಿನಂತಿಸಿದೆ."*

ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಇಂಜಿನೀಯರ್(ವಿ)(ಪ್ರಭಾರ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ ರವರು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯ ಸಭೆಯಲ್ಲಿ ದಿನಾಂಕ 16.12.2022 ರಂದು ಈ ಕೆಳಗಿನಂತೆ ಹೇಳಿಕೆಯನ್ನು ನೀಡಿರುತ್ತಾರೆ.

*"ಶ್ರೀ. ವಿನೋದ ಭಾಗ್ವತ, ವಯಸ್ಸು–42 ವರ್ಷ, ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಪ್ರಭಾರ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ, ಹೊನ್ನಾವರ ಆದ ನಾನು ದಿನಾಂಕ: 16.12.2022 ರಂದು ಸಿ.ಜಿ.ಆರ್.ಎಫ್ ಕುಂದು ಕೊರತೆ ನಿವಾರಣಾ ವೇದಿಕೆಯ ಮಧ್ಯಂತರ ಆದೇಶ 29.11.2022 ರಲ್ಲಿ ಸೂಚಿಸಿದಂತೆ ಹಾಗೂ ಪತ್ರ ಸಂಖ್ಯೆ: ಅಇಂ(ವಿ)/ಉಲೆನಿ/ಹಿಸ–2/ಕ–ಸಿ.ಜಿ.ಆರ್.ಎಫ್/2022–23/11724, ದಿನಾಂಕ: 11.12.2022 ರಲ್ಲಿ ಸೂಚಿಸಿರುವಂತೆ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರು ದಿನಾಂಕ: 18.10.2022 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ನೀಡಿದ ದೂರಿಗೆ ಸಂಬಂಧಿಸಿದಂತೆ ಪತ್ರ ಸಂಖ್ಯೆ: ಕ್ರ.ಸಂ: ಹೊನ್ನಾವರ/ ಕಾ.ನಿ.ಇಂ/ ಸ.ಕಾ.ನಿ.ಇಂ(ಕ)/ 2022–23/ 12916, ದಿನಾಂಕ: 15.12.2022 ರಲ್ಲಿ ವಿವರವಾದ ವರದಿಯನ್ನು ನೀಡಿರುತ್ತೇನೆ. ಹಾಗೂ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ಮುಂದೆ ಹಾಜರ ಪಡಿಸುತ್ತೇನೆ. ಅಲ್ಲದೇ ಈ ಕೆಳಗಿನಂತೆ ಹೇಳಿಕೆ ನೀಡುತ್ತಿದ್ದೇನೆ.*

*ಸ್ಥಾವರ ಸಂಖ್ಯೆ ಎನ್.ಐ.ಪಿ–34220 ರ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಅರ್ಜಿ ಸಲ್ಲಿಸಿರುವ ಪ್ರಕರಣ ಸಂಖ್ಯೆ: 35/2022 ಕ್ಕೆ ಸಂಬಂಧಪಟ್ಟಂತೆ ವೇದಿಕೆಯಿಂದ ಮಧ್ಯಂತರ ಆದೇಶ ಹೊರಡಿಸಿದ್ದು, ಈ ಕೆಳಸಹಿದಾರರಿಗೆ ಸ್ಥಳ ಪರಿಶೀಲಿಸಿ ವರದಿ ಸಲ್ಲಿಸಲು ಆದೇಶಿಸಲಾಗಿರುತ್ತದೆ.*

*ಅದರಂತೆ ದಿ. 08.12.2022 ರಂದು ಸದ್ರಿ ಸ್ಥಳ ಪರಿಶೀಲನೆ ಮಾಡಲಾಗಿದ್ದು ಈ ಕೆಳಗಿನಂತೆ ವರದಿ ಸಲ್ಲಿಸಲಾಗಿದೆ.*

1. *ಆರ್.ಆರ್.ಸಂಖ್ಯೆ ಎನ್.ಎಲ್–35*

*ಸ್ಥಾವರವು ಶ್ರೀ ಪರಮೇಶ್ವರ ಗಣೇಶ ಹೆಗಡೆ ಇವರ ಹೆಸರಿನಲ್ಲಿರುತ್ತದೆ. ವಿದ್ಯುತ್ ಸಂಪರ್ಕ ನೀಡಿದ ದಿನಾಂಕ: 20.03.1978 ಆಗಿರುತ್ತದೆ. ಸದ್ರಿ ಸ್ಥಾವರದ ಮಾಪಕವನ್ನು ಮರವೊಂದಕ್ಕೆ ಕಟ್ಟಿಡಲಾಗಿದೆ. ಸ್ಥಾವರಕ್ಕೆ ಸಂಬಂಧಿಸಿದ ಮನೆಯನ್ನು ಸಂಪೂರ್ಣವಾಗಿ ಕೆಡವಲಾಗಿದ್ದು ಹೊಸ ಮನೆಯ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸದ್ರಿ ಸ್ಥಾವರಕ್ಕೆ ರೂ.1770.00 ವಿದ್ಯುತ ಬಿಲ್ ಬಾಕಿ ಇರುತ್ತದ' ಸದ್ರಿ ಮಾಪಕವನ್ನು ಗ್ರಾಹಕರು ಹೆಸ್ಕಾಂಗೆ ಒಪ್ಪಿಸಕೊಡಬೇಕಾಗಿರುತ್ತದೆ. ಉಪವಿಭಾಗಾಧಿಕಾರಿಗಳು ಬಾಕಿ ವಸೂಲಾತಿಗಾಗಿ ಹಾಗೂ* **Conditions of Supply of electricity Clause No. 4.09 (xii)** *ರ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದ್ದು ಉಪವಿಭಾಗಾಧಿಕಾರಿಗಳಿಗೆ ಉಲ್ಲೇಖಿತ ಪತ್ರ–2 ರಲ್ಲಿ ಸೂಚನೆ ನೀಡಲಾಗಿರುತ್ತದೆ.*

ಮಾಪಕದ ವಿವರ ಈ ಕೆಳಗಿನಂತಿರುತ್ತದೆ.

ತಯಾರಿಕೆ: ಟಿ.ಟಿ.ಎಲ್.ಲಿಮಿಟೆಡ್, ರೀಡಿಂಗ್: 02371.6

ಸದರಿ ಸ್ಥಾವರದ Consumer History ನ್ನು ಅನುಬಂಧ-1.1 ಎಂದು ಲಗತ್ತಿಸಲಾಗಿದೆ.

2. ಆರ್.ಆರ್.ಸಂಖ್ಯೆ ಎನ್.ಎಲ್-38

ಸ್ಥಾವರವು ಶ್ರೀ ಪರಮೇಶ್ವರ ಗಣೇಶ ಹೆಗಡೆ ಇವರ ಹೆಸರಿನಲ್ಲಿರುತ್ತದೆ . ವಿದ್ಯುತ್ ಸಂಪರ್ಕ ನೀಡಿದ ದಿನಾಂಕ: 06.09.1978 ಆಗಿರುತ್ತದೆ ಸದ್ರಿ ಸ್ಥಾವರದ ಮಾಪಕವನ್ನು ಶೆಡ್ ಮಾದರಿಯ ಕಟ್ಟಡ ಗೋಡೆಗೆ ಅಳವಡಿಸಲಾಗಿದೆ. ಸದ್ರಿ ಸ್ಥಾವರಕ್ಕೆ ವಿದ್ಯುತ ಸಂಪರ್ಕವಿರುವುದಿಲ್ಲ. ಸ್ಥಾವರಕ್ಕೆ ವಿದ್ಯುತ ಸಂಪರ್ಕ ನೀಡಿರುವ ದಿನಾಂಕ 06.09.1978 ಅಂದರೆ 44 ವರ್ಷ ಹಳೆಯದಾಗಿದ್ದು, ಮಾಪಕವನ್ನು ಇತ್ತೀಚಿಗೆ ಕಟ್ಟಿರುವ ಶೆಡ್‌ನ ಗೋಡೆಗೆ ಅಳವಡಿಸಲಾಗಿರುತ್ತದೆ. ಸದ್ರಿ ಸ್ಥಾವರಕ್ಕೆ ರೂ.2140.00 ವಿದ್ಯುತ ಬಿಲ್ ಬಾಕಿ ಇರುತ್ತದೆ. ಉಪವಿಭಾಗಾಧಿಕಾರಿಗಳು ಬಾಕಿ ವಸೂಲಾತಿಗಾಗಿ ಹಾಗೂ **Conditions of Supply of electricity Clause No. 4.09 (xii)** ರ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದ್ದು ಉಪವಿಭಾಗಾಧಿಕಾರಿಗಳಿಗೆ ಉಲ್ಲೇಖಿತ ಪತ್ರ-2 ರಲ್ಲಿ ಸೂಚನೆ ನೀಡಲಾಗಿರುತ್ತದೆ.

ಮಾಪಕದ ವಿವರ ಈ ಕೆಳಗಿನಂತಿರುತ್ತದೆ.

ತಯಾರಿಕೆ: ಟಿ.ಟಿ.ಎಲ್.ಲಿಮಿಟೆಡ್, ಕ್ರ.ಸಂ.ಕೆ1-472100 ,ರೀಡಿಂಗ್:6526.2

ಸದರಿ ಸ್ಥಾವರದ **Consumer History** ನ್ನು ಅನುಬಂಧ-1.2 ಎಂದು ಲಗತ್ತಿಸಲಾಗಿದೆ.

3. ಆರ್.ಆರ್.ಸಂಖ್ಯೆ ಎನ್.ಎಲ್-68

ಸ್ಥಾವರವು ಶ್ರೀಮತಿ ಸುಬ್ಬಿ ಗಣೇಶ ಹೆಗಡೆ ಇವರ ಹೆಸರಿನಲ್ಲಿರುತ್ತದೆ. ವಿದ್ಯುತ್ ಸಂಪರ್ಕ ನೀಡಿದ ದಿನಾಂಕ: 05.08.1985 ಆಗಿರುತ್ತದೆ ಸದ್ರಿ ಸ್ಥಾವರಕ್ಕೆ ಸಂಬಂಧಿಸಿದಂತೆ ಮನೆಯು ತೀರಾ ಹಳೆಯದಾಗಿದ್ದು ಶಿಥಿಲಾವಸ್ಥೆಯಲ್ಲಿ ಇರುತ್ತದೆ. ಮನೆಯಲ್ಲಿ ಯಾವುದೇ ಜನವಸತಿ ಇರುವುದಿಲ್ಲ. ಸದ್ರಿ ಸ್ಥಾವರಕ್ಕೆ ವಿದ್ಯುತ ಸಂಪರ್ಕವಿಲ್ಲವಾಗಿದ್ದು ಉಪವಿಭಾಗದ ಕಂದಾಯ ದಾಖಲೆಗಳಲ್ಲಿ ಫೆಬ್ರವರಿ-22 ರಿಂದ "ಲಾಂಗ್ ಡಿಸ್" ಎಂದು ನಮೂದಿಸಲಾಗಿರುತ್ತದೆ. ಉಪವಿಭಾಗಾಧಿಕಾರಿಗಳು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದ್ದು **Conditions of Supply of electricity Clause No. 32.07 & 32.08** ಅನ್ವಯ ಪ್ರಕ್ರಿಯೆಗಳನ್ನು ಜರುಗಿಸಬೇಕಾಗಿದ್ದು ಉಪವಿಭಾಗಾಧಿಕಾರಿಗಳಿಗೆ ಉಲ್ಲೇಖಿತ ಪತ್ರ-2 ರಲ್ಲಿ ಸೂಚನೆ ನೀಡಲಾಗಿರುತ್ತದೆ.

ಮಾಪಕದ ವಿವರ ಈ ಕೆಳಗಿನಂತಿರುತ್ತದೆ.

ತಯಾರಿಕೆ: ಬಿ.ಹೆಚ್.ಇ.ಎಲ್, ಕ್ರ.ಸಂ.438058, ರೀಡಿಂಗ್: 1042.2

ಸದರಿ ಸ್ಥಾವರದ **Consumer History** ನ್ನು ಅನುಬಂಧ-1.3 ಎಂದು ಲಗತ್ತಿಸಲಾಗಿದೆ.

4. ಆರ್.ಆರ್.ಸಂಖ್ಯೆ ಎನ್.ಐ.ಪಿ-23

ಸ್ಥಾವರವು ಶ್ರೀಮತಿ ಸುಬ್ಬಿ ಗಣೇಶ ಹೆಗಡೆ ಇವರ ಹೆಸರಿನಲ್ಲಿರುತ್ತದೆ ವಿದ್ಯುತ್ ಸಂಪರ್ಕ ನೀಡಿದ ದಿನಾಂಕ: 24.10.1981 ಆಗಿರುತ್ತದೆ ಸ್ಥಾನಿಕ ಪರಿಶೀಲನೆ ಸಮಯದಲ್ಲಿ ಸದ್ರಿ ಸ್ಥಾವರಕ್ಕೆ ಥ್ರೀ ಫೇಸ್ ವಿದ್ಯುತ ಸಂಪರ್ಕವಿರುವುದು ಕಂಡುಬಂದಿರುತ್ತದೆ. ಸದ್ರಿ ಸ್ಥಾವರವು ಕೊಳವೆ ಬಾವಿಗೆ ಸಂಪರ್ಕಿತವಾಗಿರುತ್ತದೆ.

ಮಾಪಕದ ವಿವರ ಈ ಕೆಳಗಿನಂತಿರುತ್ತದೆ.

ತಯಾರಿಕೆ:ಕ್ಯಾಪಿಟಲ್ ಮೀಟರ್ಸ್, ಕ್ರ.ಸಂ.545487, ರೀಡಿಂಗ್:2387.2

ಸದರಿ ಸ್ಥಾವರದ **Consumer History** ನ್ನು ಅನುಬಂಧ-1.4 ಎಂದು ಲಗತ್ತಿಸಲಾಗಿದೆ.

5. ಆರ್.ಆರ್.ಸಂಖ್ಯೆ ಎನ್.ಐ.ಪಿ–34220

ಸ್ಥಾವರವು ಶ್ರೀ ಗಣೇಶ ಪರಮೇಶ್ವರ ಹೆಗಡೆ ಇವರ ಹೆಸರಿನಲ್ಲಿರುತ್ತದೆ ವಿದ್ಯುತ್ ಸಂಪರ್ಕ ನೀಡಿದ ದಿನಾಂಕ: 09.01.2018 ಆಗಿರುತ್ತದೆ ಸ್ಥಾನಿಕ ಪರಿಶೀಲನೆ ಸಮಯದಲ್ಲಿ ಸದ್ರಿ ಸ್ಥಾವರಕ್ಕೆ ಥ್ರೀ ಫೇಸ್ ವಿದ್ಯುತ ಸಂಪರ್ಕವಿರುವುದು ಕಂಡುಬಂದಿರುತ್ತದೆ. ಸದ್ರಿ ಸ್ಥಾವರವು ತೆರೆದ ಬಾವಿಗೆ ಸಂಪರ್ಕಿತವಾಗಿರುತ್ತದೆ.ಮಾಪಕದ ವಿವರ ಈ ಕೆಳಗಿನಂತಿರುತ್ತದೆ.

ಸ್ಥಳ ಪರಿಶೀಲನೆ ಸಮಯದಲ್ಲಿ ಪಂಪ್ ಚಾಲು ಮಾಡಿದಾಗ ಮಾಪಕದ ವ್ಹೀಲ್ ತಿರುಗದೇ ಇರುವುದು ಕಂಡುಬಂದಿರುತ್ತದೆ. (ಎಂ.ಎನ್.ಆರ್)

ತಯಾರಿಕೆ: ಬಿ.ಹೆಚ್.ಇ.ಎಲ್ ( ಸಿಂಗಲ್ ಫೇಸ್ ಮಾಪಕ) , ಕ್ರ.ಸಂ.322604 , ರೀಡಿಂಗ್:7949.9

ಸದರಿ ಸ್ಥಾವರದ **Consumer History** ನ್ನು ಅನುಬಂಧ–1.5 ಎಂದು ಲಗತ್ತಿಸಲಾಗಿದೆ.

ಸದರಿ ಸ್ಥಾವರದ ಗ್ರಾಹಕರಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೊನ್ನಾವರ ರವರ ಕಚೇರಿಯಿಂದ ಪತ್ರ ಸಂಖ್ಯೆ: ಹೊನ್ನಾವರ/ಸಕಾನಿಇಂ(ವಿ)/ಕಂದಾಯ–14481, ದಿನಾಂಕ: 24.03.2022 ರಂದು ಪತ್ರ ಬರೆದು ಪ್ರಕರಣ ಸಂಖ್ಯೆ: 35/14.10.2022 ರ ಪ್ರಕಾರ ಜಾಗ್ರುತಾ ದಳ ದವರು ಕಂಡು ಹಿಡಿದ ಹಿಂಬಾಕಿ ಮೊತ್ತ 5500.00 ರನ್ನು ಪಾವತಿಸಲು ಸೂಚಿಸಲಾಗಿತ್ತು. ಆದರೆ ಗ್ರಾಹಕರು ದಂಡದ ಮೊತ್ತದ ಶೇ.50 ರಷ್ಟು ಪಾವತಿಸದೇ ನೇರವಾಗಿ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಅರ್ಜಿ ಸಲ್ಲಿಸಿರುತ್ತಾರೆ.

ಅಲ್ಲದೇ ಕೆ.ಇ.ಆರ್.ಸಿ ಒಂಬಡ್ಸಮನ್ ಆದೇಶ ಸಂಖ್ಯೆ: **OMB/B/G-435/2021, OMB/B/G-429/2021 & OMB/B/G-297/2018** ಆದೇಶಗಳನ್ವಯ ಸದರಿ ಜಕಾತಿ ದುರ್ಬಳಕೆ ವಿರುದ್ಧದ ದೂರು ಸಿ.ಜಿ.ಆರ್.ಎಫ್ ನಲ್ಲಿ ಸ್ವೀಕಾರ್ಹವಾಗಿರುವದಿಲ್ಲ.

6. ಆರ್.ಆರ್.ಸಂಖ್ಯೆ ಎನ್.ಐ.ಪಿ–17

ಸ್ಥಳ ಪರಿಶೀಲನೆ ಸಮಯದಲ್ಲಿ ಜಾಗದ ಪ್ರವೇಶದ ಎಡಭಾಗದಲ್ಲಿ ಎರಡು ಸಣ್ಣ ಕಂಬಗಳನ್ನು ಹುಗಿದು ಮೀಟರ್ ಬಾಕ್ಸ ಹಾಗೂ ಮೀಟರ್ ಅಳವಡಿಸಿದ್ದು ಕಂಡುಬಂದಿದ್ದು ಸರ್ವಿಸ್ ವಾಯರ್ ಕೆಳಗೆ ಬಿದ್ದಿದ್ದು ವಿದ್ಯುತ ಸಂಪರ್ಕವಿರುವುದಿಲ್ಲ. ಮಾಪಕದ ವಿವರ ಈ ಕೆಳಗಿನಂತಿರುತ್ತದೆ.

ತಯಾರಿಕೆ: ಕ್ಯಾಪಿಟಲ್ ಮೀಟರ್ಸ್, ರೀಡಿಂಗ್: 00018.5.

ಸದ್ರಿ ಮೀಟರ್ ಎನ್.ಆಯ್.ಪಿ–17 ಸ್ಥಾವರದ್ದಾಗಿದ್ದು, ಅದಕ್ಕೆ ವಿದ್ಯುತ ಸಂಪರ್ಕ ನೀಡಲು ಕೇಳಿರುತ್ತಾರೆ. ಸ್ಥಾವರವು ಶ್ರೀ. ಪರಮೇಶ್ವರ ಗಣೇಶ ಹೆಗಡೆ ಇವರ ಹೆಸರಿನಲ್ಲಿರುತ್ತಿದ್ದು ಸಂಪರ್ಕ ನೀಡಿದ ದಿನಾಂಕ: 04.08.1979 ಆಗಿರುತ್ತದೆ. ಸದ್ರಿ ಸ್ಥಾವರ/ಮಾಪಕ ಈ ಮುಂಚೆ ಬೇರೆ ಸ್ಥಳದಲ್ಲಿ ಸಂಪರ್ಕದಲ್ಲಿದ್ದು, ಹಾಲಿ ಇರುವ ಸ್ಥಳಕ್ಕೆ ಸ್ಥಳಾಂತರ ಮಾಡಲಾಗಿರುತ್ತದೆ ಎಂದು ಸ್ಥಳ ಪರಿಶೀಲನೆ ಸಮಯದಲ್ಲಿ ಕ್ಯಾಂಪ್ ಲೈನಮ್ಯಾನ್,ಮಾಪಕ ಓದುಗ, ಶಾಖಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳು ಮೌಖಿಕವಾಗಿ ತಿಳಿಸಿರುತ್ತಾರೆ. ಆದ ಕಾರಣ ಎನ್.ಆಯ್.ಪಿ–17 ಸ್ಥಾವರಕ್ಕೆ ಸಂಬಂಧಿಸಿದ ದಾಖಲೆಗಳನ್ನು/ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು ವಸ್ತುಸ್ಥಿತಿಯ ವರದಿ ನೀಡಲು ಉಪವಿಭಾಗಾಧಿಕಾರಿಗಳಿಗೆ ಉಲ್ಲೇಖಿತ ಪತ್ರ–2 ರಲ್ಲಿ ಸೂಚನೆ ನೀಡಲಾಗಿರುತ್ತದೆ. ಸದರಿ ಸ್ಥಾವರದ **Consumer History** ನ್ನು ಅನುಬಂಧ–1.6 ಎಂದು ಲಗತ್ತಿಸಲಾಗಿದೆ.

ಕೇವಲ ಎನ್.ಆಯ್.ಪಿ–34220 ಸ್ಥಾವರ ಮಾತ್ರ ದೂರುದಾರರಾದ ಶ್ರೀ ಗಣೇಶ ಪರಮೇಶ್ವರ ಹೆಗಡೆ ಇವರ ಹೆಸರಿನಲ್ಲಿದ್ದು ಉಳಿದೆಲ್ಲ ಸ್ಥಾವರಗಳು ಬೇರೆಯವರ ಹೆಸರಿನಲ್ಲಿರುತ್ತದೆ. **KERC (CGRF & Ombudsman) Regulations 2004** ರ **Section 2(g) and (h)** ಹಾಗೂ ಗೌರವಾನ್ವಿತ ವಿದ್ಯುತ್ ಲೋಕಪಾಲರು **Case No.OMB/B/G-363/2019,** ದಿನಾಂಕ: 18.11.2020 **Sri. K.S Ravikumar V/s Assistant Executive Engineer(Elec), BESCOM, Bengaluru & Others** ಪ್ರಕರಣದಲ್ಲಿ ನೀಡಿರುವ ಆದೇಶದ ಪ್ರಕಾರ ಗ್ರಾಹಕರು ತಮ್ಮ ಹೆಸರಿನಲ್ಲಿರುವ ಸ್ಥಾವರಗಳ ಕುರಿತಂತೆ ಮಾತ್ರ ಗ್ರಾಹಕರ ಕುಂದು ಕೊರತೆ ವೇದಿಕೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅದರಂತೆ ಎನ್.ಆಯ್.ಪಿ–34220 ಸ್ಥಾವರದ ಹೊರತಾಗಿ ಶ್ರೀ ಗಣೇಶ ಪರಮೇಶ್ವರ ಹೆಗಡೆ ಇವರು ಬೇರೆ ಸ್ಥಾವರಗಳ ಕುರಿತಂತೆ ಯಾವುದೇ ದೂರನ್ನು ಸಲ್ಲಿಸಲು ಅವಕಾಶವಿರುವದಿಲ್ಲ.

## ನ್ಯಾಯಾಲಯದಲ್ಲಿ ಇರುವ ಪ್ರಕರಣಗಳ ವಿವರ

2010 ನೇ ಇಸವಿಯಲ್ಲಿ ಶ್ರೀ ಕಾಶೀನಾಥ ಭಾಗ್ವತ ಇವರು ತಮ್ಮ ಜಾಗದ ಮೇಲಿಂದ ಶ್ರೀ ಪರಮೇಶ್ವರ ಗಣೇಶ ಹೆಗಡೆ ಇವರ ಸ್ಥಾವರಗಳಿಗೆ ಸಂಪರ್ಕಿತವಾಗಿದ್ದ 3 ಫೇಸ್ 4 ವಾಯರ್ ವಿದ್ಯುತ ಮಾರ್ಗವನ್ನು ಸ್ವಯಂಕಾರ್ಯಗತ ಯೋಜನೆಯಡಿಯಲ್ಲಿ ಶ್ರೀ. ಕಾಶಿನಾಥ ಭಾಗ್ವತ ಅವರದೇ ಜಾಗದಲ್ಲಿ ಸ್ಥಳಾಂತರ ಮಾಡಿಸಲು ಅಂದಾಜು ಪಟ್ಟಿ ಮಂಜೂರ ಮಾಡಿಕೊಂಡು (ಸ್ಥಳಾಂತರ ಮಾಡುವ ಪೂರ್ವದಲ್ಲಿರುವ ವಿದ್ಯುತ್ ಮಾರ್ಗದ ನಕ್ಷೆಯನ್ನು ಅನುಬಂಧ–6.3 ಎಂದು ಲಗತ್ತಿಸಿದೆ.) ಗುತ್ತಿಗೆದಾರರ ಮೂಲಕ ಕೆಲಸ ಮಾಡಿಸುವಾಗ ಶ್ರೀ. ಪರಮೇಶ್ವರ ಗಣೇಶ ಹೆಗಡೆ ರವರು ತಕರಾರು ಮಾಡಿದ್ದರಿಂದ, ಸ್ಥಳಾಂತರದ ಸಲುವಾಗಿ ಕಳಚಿದ್ದ ವಿದ್ಯುತ ಮಾರ್ಗವನ್ನು ಅಳವಡಿಸಲಾಗದೇ ಕಾಮಾರಿ ಅಪೂರ್ಣವಾಗಿ ಉಳಿದಿರುತ್ತದೆ. ಸದರಿ ಅಂದಾಜು ಪತ್ರಿಕೆಯ ಮಂಜೂರಾತಿ ಪ್ರತಿಯನ್ನು ಅನುಬಂಧ–6.4 ಎಂದು ಲಗತ್ತಿಸಲಾಗಿದೆ. ನಂತರದಲ್ಲಿ ಕೋಟೆಡ್ ಸರ್ವಿಸ್ ವಾಯರ್ ಎಳೆದು ಶ್ರೀ. ಪರಮೇಶ್ವರ ಗಣೇಶ ಹೆಗಡೆ ಇವರ ಸ್ಥಾವರಗಳಿಗೆ ವಿದ್ಯುತ ಸಂಪರ್ಕ ನೀಡಲಾಗಿರುತ್ತದೆ.

2014 ನೇ ಇಸವಿಯಲ್ಲಿ ಮೊದಲಿದ್ದ ರೀತಿಯಲ್ಲೇ ತಮ್ಮ ಜಾಗದ ಮೇಲಿಂದ ವಿದ್ಯುತ ಮಾರ್ಗ ಎಳೆಯಬಹುದೆಂದು ಊಹಿಸಿ ಆ ರೀತಿ ಮಾರ್ಗ ಎಳೆಯುವದನ್ನು ತಡೆಯಲು ಶ್ರೀ ಕಾಶೀನಾಥ ಭಾಗ್ವತ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ಉಪ–ವಿಭಾಗ, ಹೆಸ್ಕಾಂ., ಹೊನ್ನಾವರ, ಪ್ರಧಾನ ವ್ಯವಸ್ಥಾಪಕರು ಹೆಸ್ಕಾಂ., ಹುಬ್ಬಳ್ಳಿ ಹಾಗೂ ಇತರರ ವಿರುದ್ಧ ಹೊನ್ನಾವರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾವಾ ಹೂಡಿದ್ದು ಪ್ರಕರಣ ಸಂಖ್ಯೆ ಓ.ಎಸ್.12/2014 ಆಗಿರುತ್ತದೆ. ಸದ್ರಿ ದಾವೆಗೆ ಸಂಬಂಧಿಸಿದಂತೆ ಶ್ರೀ ಕಾಶೀನಾಥ ಭಾಗ್ವತ **(plaintiff)** ಮಾಡಿರುವ **claim** ನ್ನು ಹಾಗೂ ಶ್ರೀ ಪರಮೇಶ್ವರ ಗಣೇಶ ಹೆಗಡೆ & ಶ್ರೀ ಗಣೇಶ ಪರಮೇಶ್ವರ ಹೆಗಡೆ **(defendants)** ಇವರು ಮಾಡಿರುವ **counter claim** ನ್ನು ತೊಡೆದು ಹಾಕಲಾಗಿರುತ್ತದೆ. ಸದ್ರಿ ಪ್ರಕರಣಕ್ಕೆ ಸಂಬಂಧಿಸಿದುತೆ ದಿ.07.06.2019 ರಂದು ಆದೇಶ ನೀಡಲಾಗಿದ್ದು ಪ್ರತಿಯನ್ನು ಈ ಪತ್ರದ ಜೊತೆ ಅನುಬಂಧ–2 ಎಂದು ಲಗತ್ತಿಸಲಾಗಿದೆ.

ನಂತರ ದಿ.19.07.2019 ರಂದು ಶ್ರೀ ಕಾಶೀನಾಥ ಭಾಗ್ವತರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ಉಪವಿಭಾಗ, ಹೆಸ್ಕಾಂ., ಹೊನ್ನಾವರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ., ಹುಬ್ಬಳ್ಳಿ ಹಾಗೂ ಇತರರ ವಿರುದ್ಧ ಹೊನ್ನಾವರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ರೆಗ್ಯುಲರ್ ಅಪೀಲ್ ದಾವಾ ಹೂಡಿದ್ದು ಪ್ರಕರಣ ಸಂಖ್ಯೆ ಆರ್.ಎ/05/2019 ಆಗಿದ್ದು ವಿಚಾರಣಾ ಹಂತದಲ್ಲಿರುತ್ತದೆ. ಸದರಿ ಪ್ರಕರಣದ ಆರ್ಡರ್ ಶೀಟ್ ಪ್ರತಿಗಳನ್ನು ಅನುಬಂಧ–3 ಎಂದು ಲಗತ್ತಿಸಲಾಗಿದೆ.

ಸದ್ರಿ ಪ್ರಕರಣವನ್ನು ಹೆಸ್ಕಾಂ ವಕೀಲರಾದ ಶ್ರೀ ಕೆ.ಎಸ್.ಭಟ್ಟ ಇವರು ಹೆಸ್ಕಾಂ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದು ಸದ್ರಿ ಜಾಗದಲ್ಲಿ ವಿದ್ಯುತ ಮಾರ್ಗದ ಸ್ಥಿತಿಯನ್ನು ಯಥಾ ಸ್ಥಿತಿ ಕಾಯ್ದುಕೊಂಡು ಹೋಗುವುದು ಸೂಕ್ತ ಎಂದು ಸಲಹೆ ನೀಡಿರುತ್ತಾರೆ. ಸದರಿ ಪತ್ರವನ್ನು ಅನುಬಂಧ-4 ಎಂದು ಲಗತ್ತಿಸಿದೆ.

ಶ್ರೀ ಗಣೇಶ ಪರಮೇಶ್ವರ ಹೆಗಡೆ ಇವರಿಗೆ ಸಂಬಂಧಿಸಿದ ಆವರಣದಲ್ಲಿ ಹಾಲಿ ಎರಡು ನೀರಾವರಿ ಪಂಪ್ ಸ್ಥಾವರಗಳಿಗೆ ವಿದ್ಯುತ ಸಂಪರ್ಕವಿರುತ್ತದೆ. ಸದರಿ ಮಾರ್ಗದ ನಕ್ಷೆಯನ್ನು ಅನುಬಂಧ-6.2 ಎಂದು ಲಗತ್ತಿಸಲಾಗಿದೆ. ಹಾಲಿ ಎನ್.ಐ.ಪಿ-34220 & ಎನ್.ಐ.ಪಿ-23 ಸ್ಥಾವರ ಸಮೀಪ ಇರುವ ಕಂಬಕ್ಕೆ ರಸ್ತೆ ಪಕ್ಕದಲ್ಲಿರುವ ಕಂಬದಿಂದ ಸುಮಾರು 80 ಮೀ ಅಂತರವಿದ್ದು ಕೋಟೆಡ್ ವಾಯರ್ ಮೂಲಕ ಸಂಪರ್ಕವಿರುತ್ತದೆ. ಸದ್ರಿ ಕೋಟೆಡ್ ವಾಯರ್ ಹಳೆಯದಾಗಿದ್ದು, ಹಲವಾರು ಜೋಡಣೆಗಳನ್ನು ಹೊಂದಿದ್ದು ಪದೇ ಪದೇ ವಿದ್ಯುತ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುತ್ತದೆ ಎಂದು ಗ್ರಾಹಕರು ದೂರಿದ್ದು ಸರಿಪಡಿಸಲು ಕೋರಿರುತ್ತಾರೆ.

ಸದ್ರಿ ಕೋಟೆಡ್ ಸರ್ವಿಸ್ ವಾಯರ್ ಶ್ರೀ ಗಣೇಶ ಹೆಗಡೆ ಹಾಗೂ ಅವರ ನೆರೆಯವರಾದ ಶ್ರೀ ಕಾಶೀನಾಥ ಭಾಗ್ವತ ಇವರ ಗಡಿಯ ಮೇಲೆ ಹಾದು ಹೋಗಿದ್ದು ಸ್ಥಳವು ಸಂಪೂರ್ಣ ಮರಗಳಿಂದ ಆವೃತವಾಗಿರುತ್ತದೆ. ಸದ್ರಿ ಸ್ಥಳದಲ್ಲಿ ಇರುವ ಇಬ್ಬರಿಗೂ ಸಂಬಂಧಿಸಿದ ಮರಗಳನ್ನು ಕಡಿದು ಖುಲ್ಲಾಪಡಿಸಿದಲ್ಲಿ ಮಾತ್ರ, ಒಂದು ಮಧ್ಯಂತರ ಕಂಬ ನಿಲ್ಲಿಸಿ ವೀಸಲ್ ವಾಹಕ ಎಳೆದು ಶ್ರೀ ಗಣೇಶ ಹೆಗಡೆ ಅವರ ನೀರಾವರಿ ಸ್ಥಾವರಕ್ಕೆ ಕೋಟೆಡ್ ವಾಯರ್ ಬದಲು ವೀಸಲ್ ವಾಹಕದ ಮೂಲಕ ವಿದ್ಯುತ ಪೂರೈಕೆ ಮಾಡಲು ಸಾಧ್ಯವಿರುತ್ತದೆ. ಅದರಲ್ಲೂ ಶ್ರೀ. ಗಣೇಶ ಹೆಗಡೆ ಇವರು ಹೊಸದಾಗಿ ಮನೆ ನಿರ್ಮಾಣ ಮಾಡುತ್ತಿದ್ದು ಸದ್ರಿ ವಿದ್ಯುತ್ ಮಾರ್ಗ ಕಟ್ಟಡದ ಸಮೀಪದಿಂದ ಹಾದು ಹೋಗಬೇಕಾಗಿದ್ದು ಕಟ್ಟಡದಿಂದ ಇರಬೇಕಾದ ಕನಿಷ್ಟ ಅಂತರ ಪಾಲಿಸಲು ಸಮಸ್ಯೆ ಇರುತ್ತದೆ. ದೂರುದಾರರು ಸುಮಾರು 12 ವರ್ಷಗಳ ಹಿಂದೆ ಅವರ ತಂದೆಯ ಕಾಲದಲ್ಲಿ ವಿದ್ಯುತ ಮಾರ್ಗ ಹೇಗಿತ್ತೋ ಅದೇ ರೀತಿ ಮಾರ್ಗ ಎಳೆಯಲು ಕೋರಿರುವುದು ಸಮಂಜಸವಾಗಿರುವುದಿಲ್ಲ. ಎನ್.ಐ.ಪಿ-34220 & ಎನ್.ಐ.ಪಿ-23 ಸ್ಥಾವರಗಳ ಸಂಪರ್ಕಕ್ಕೆ ವಿದ್ಯುತ ಲೈನ್ ಎಳೆಯುವ ಬಗ್ಗೆ ಶ್ರೀ ಕಾಶೀನಾಥ ಭಾಗ್ವತ ಇವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಹಾಗೂ ಸದ್ರಿ ಪ್ರಕರಣ ಆರ್.ಎ/5/2019 ವಿಚಾರಣಾ ಹಂತದಲ್ಲಿದ್ದು, ದಾವೆ ಇತ್ಯರ್ಥವಾಗುವವರೆಗೆ ಸದ್ರಿ ಸ್ಥಳದಲ್ಲಿ ವಿದ್ಯುತ ಮಾರ್ಗಕ್ಕೆ ಸಂಬಂಧಪಟ್ಟಂತೆ ಯಥಾ ಸ್ಥಿತಿ ಕಾಯ್ದುಕೊಳ್ಳಲು ಹೆಸ್ಕಾಂ ವಕೀಲರು ಸಲಹೆ ನೀಡಿರುತ್ತಾರೆ.

ಆದ ಕಾರಣ ಹಾಲಿ ಇರುವ ಸುಮಾರು 80 ಮೀ ಉದ್ದವಾಗಿರುವ ಕೋಟೆಡ್ ವಾಯರ್‌ನಿಂದ ಗ್ರಾಹಕರಿಗೆ ವಿದ್ಯುತ ಪೂರೈಕೆಯಲ್ಲಿ ಸಮಸ್ಯೆ ಆಗುತ್ತಿರಬಹುದಾಗಿರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಶ್ರೀ ಗಣೇಶ ಪರಮೇಶ್ವರ ಹೆಗಡೆ ಇವರ ಜಾಗದ ಗೇಟಿನ ಎದುರಿಗೆ ಇರುವ ಎಲ್.ಟಿ. ಕಂಬದಿಂದ ಟ್ಯಾಪ ಮಾಡಿಕೊಂಡು ಅವರದೇ ಜಾಗದಲ್ಲಿ ಅಗತ್ಯವಿರುವ ವಿದ್ಯುತ ಕಂಬಗಳನ್ನು ಅಳವಡಿಸಿ ವೀಸಲ್ ವಾಹಕ ಎಳೆದು ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ಹೆಸರಿನಲ್ಲಿರುವ ಸ್ಥಾವರ ಎನ್.ಐ.ಪಿ-34220 ಕ್ಕೆ ಜಾಗೃತದಳದವರು ವಿಧಿಸಿದ ದಂಡ ರೂ. 5500.00 ಪಾವತಿಸುವ ಷರತ್ತಿಗಳೊಪಟ್ಟು ವಿದ್ಯುತ ಸಂಪರ್ಕ ನೀಡುವುದು ಸೂಕ್ತ ಎಂದು ಕಂಡುಬಂದಿರುತ್ತದೆ. ಈ ರೀತಿ ಅಳವಡಿಸುವ ಕಂಬದಿಂದ ಸ್ಥಾವರ ಸಂಖ್ಯೆ: ಎನ್.ಐ.ಪಿ-23 ಕ್ಕೂ ಸಹ ವಿದ್ಯುತ್ ಸಂಪರ್ಕ ನೀಡಬಹುದಾಗಿದೆ. ಪ್ರಸ್ತಾಪಿಸಿರುವ ವಿದ್ಯುತ್ ಮಾರ್ಗದ ನಕ್ಷೆಯನ್ನು ಅನುಬಂಧ-6.5 ಎಂದು ಲಗತ್ತಿಸಲಾಗಿದೆ. ಅದರಂತೆ ಈ ಮೇಲೆ ತಿಳಿಸಿರುವ ಅಂಶಗಳಿಗನುಗುಣವಾಗಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಉಪವಿಭಾಗಾಧಿಕಾರಿಗಳಿಗೆ ಉಲ್ಲೇಖಿತ ಪತ್ರ-2 ರಲ್ಲಿ ಸೂಚನೆ ನೀಡಲಾಗಿರುತ್ತದೆ."

## V) ವಿವಾದಾಂಶಗಳು (Issues)

1. ಈ ಹಂತದಲ್ಲಿ ದೂರಿನ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳು ಮೂಡಿ ಬರುತ್ತವೆ.
   (i) ಸ್ಥಾವರ ಸಂಖ್ಯೆ NIP-34220 ಗೆ ಸಂಬಂಧಿಸಿದಂತೆ ವಿದ್ಯುತ್ ದುರ್ಬಳಕೆ ಮಾಡದಿದ್ದರೂ LT-4 ರಿಂದ LT-7 ಕ್ಕೆ ಬಳಕೆ ಮಾಡಿದ್ದಾರೆಂದು ಸುಳ್ಳು ಆರೋಪ ಮಾಡಿರುವ ಬಗ್ಗೆ, ವಿನಾಕಾರಣ ಹಳೆ ದ್ವೇಷದಿಂದ ರೂ. 5500.00 ರೂಪಾಯಿ ದುರುದ್ದೇಶದಿಂದ ವಿಧಿಸಿರುವುದರ ಬಗ್ಗೆ, ಕೃಷಿ ಪಂಪಿನ ಲೈನ್ ತಪ್ಪಿಸಿ ಒಂದು ಲಕ್ಷ ರೂಪಾಯಿ ಲುಕ್ಸಾನು ಮಾಡಿದ್ದರ ಬಗ್ಗೆ, ಉದ್ದೇಶ ಪೂರ್ವಕವಾಗಿ ಪ್ರಾಧಿಕಾರದ ವ್ಯಾಪ್ತಿ ತಪ್ಪಿಸಲು ಸೆಕ್ಷನ್–126, 135, 136 ನಮೂದಿಸಿರುವದರ ಬಗ್ಗೆ ನೀಡಿದ ದೂರನ್ನು ದೂರುದಾರರು ಸಾಬೀತುಪಡಿಸಿರುತ್ತಾರೆಯೇ?
   (ii) ಏನು ಆದೇಶ?
2. ಈ ಕೆಳಗಿನ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ರೀತಿ ಉತ್ತರಿಸಿದ್ದೇವೆ.
   (i) ಅಂಶ (i)–ನಕಾರಾತ್ಮಕವಾಗಿ.
   (ii) ಅಂಶ (ii)–ಕಡೆಯ ಆದೇಶದಂತೆ.

## ಕಾರಣಗಳು

ಈ ಮೇಲಿನ ಹೇಳಿಕೆಗಳನ್ನು, ಹಾಜರಪಡಿಸಿದ ದಾಖಲೆಗಳನ್ನು ಹಾಗೂ ಅನ್ವಯಿಸುವ ನಿಯಮಾವಳಿಗಳನ್ನು ಕೂಲಂಕುಶವಾಗಿ ಅವಲೋಕಿಸಿದಾಗ ಈ ಕೆಳಗಿನ ಅಂಶಗಳು ವೇದಿಕೆಯ ಗಮನಕ್ಕೆ ಬಂದಿರುತ್ತವೆ.

1. ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರು ನಮೂನೆ–ಎ ರಲ್ಲಿ ಆರ್.ಆರ್.ಸಂಖ್ಯೆ: NIP-34220 ಎಂದು ದಾಖಲಿಸಿ ಹೇಳಿಕೆಗಳಲ್ಲಿ ಹಾಗೂ ಇನ್ನಿತರ ಪತ್ರ/ದಾಖಲೆಗಳಲ್ಲಿ ಆರ್.ಆರ್.ಸಂಖ್ಯೆ: NIP-23, NL-38, NL-68, NL-35, NIP-34220 ಹಾಗೂ NIP-17 ಗಳನ್ನು ಕೂಡ ದಾಖಲಿಸಿರುತ್ತಾರೆ. ಹೇಳಿಕೆಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ ಆರ್.ಆರ್ ಸಂಖ್ಯೆ NIP-34220 ರ ಸ್ಥಾವರವು ಮಾತ್ರ ಶ್ರೀ ಗಣೇಶ ಪರಮೇಶ್ವರ ಹೆಗಡೆ ರವರ ಹೆಸರಿನಲ್ಲಿದ್ದು ದಿನಾಂಕ: 09.01.2018 ರಂದು ವಿದ್ಯುತ್ ಸಂಪರ್ಕ ನೀಡಿದ್ದು ಇರುತ್ತದೆ. ಉಳಿದ ಸ್ಥಾವರಗಳು ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ಹೆಸರಿನಲ್ಲಿರುವದಿಲ್ಲ. ವಿವರ ಈ ಕೆಳಗಿನಂತಿದೆ.

| ಅ.ಸಂ. | ಸ್ಥಾವರ. ಸಂಖ್ಯೆ | Tariff | ನೋಂದಾಯಿತ ಗ್ರಾಹಕರ ಹೆಸರು | ವಿದ್ಯುತ್ ಸಂಪರ್ಕ ನೀಡಿದ ದಿನಾಂಕ |
|---|---|---|---|---|
| 1 | NL-35 | LT-2(a)(ii)-R | ಶ್ರೀ. ಪರಮೇಶ್ವರ ಗಣೇಶ ಹೆಗಡೆ | 20.03.1978 |
| 2 | NL-38 | LT-2(a)(ii)-R | ಶ್ರೀ. ಪರಮೇಶ್ವರ ಗಣೇಶ ಹೆಗಡೆ | 06.09.1978 |
| 3 | NL-68 | LT-2(a)(ii)-R | ಶ್ರೀಮತಿ. ಸುಬ್ಬಿ ಗಣೇಶ ಹೆಗಡೆ | 05.08.1985 |
| 4 | NIP-23 | LT-4(a) | ಶ್ರೀಮತಿ. ಸುಬ್ಬಿ ಗಣೇಶ ಹೆಗಡೆ | 24.10.1981 |
| **5** | **NIP-34220** | **LT-4(a)** | **ಶ್ರೀ. ಗಣೇಶ ಪರಮೇಶ್ವರ ಹೆಗಡೆ** | **09.01.2018** |
| 6 | NIP-17 | LT-4(a) | ಶ್ರೀ. ಪರಮೇಶ್ವರ ಗಣೇಶ ಹೆಗಡೆ | 04.08.1979 |

KERC (CGRF & Ombudsman) Regulations 2004 ರ Section 2(g) and (h) ಈ ಕೆಳಗಿನಂತಿರುತ್ತದೆ.

| | |
|---|---|
| 2 (g) | *'Complaint' means any grievance made by a consumer with regard to supply of electricity by the licensee, provided that grievance falling within the purview of any of the following provisions of the Act are excluded from the jurisdiction of the Forum:*<br>*(1) unauthorized use of electricity as provided under section 126 of the Act*<br>*(2) offences and penalties as provided under section 135 to 139 of the Act*<br>*(3) accident in the distribution, supply or use of electricity as provided under Section 161 of the Act.* |
| *2(h)* | *'Consumer' means any person who is supplied with electricity for his own use by a licensee under this Act or any other law for the time being in force and includes any person whose premises are for the time being connected for the purpose of receiving electricity with the works of a licensee.* |

ಈ ಮೇಲೆ ತಿಳಿಸಿದ KERC (CGRF & Ombudsman) Regulations 2004 ರ Section 2(g) and (b) ಪ್ರಕಾರ ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರು ಸ್ಥಾವರ ಸಂಖ್ಯೆ: NIP-34220 ಹೊರತು ಪಡಿಸಿ ಉಳಿದ ಸ್ಥಾವರಗಳಿಗೆ ನೋಂದಾಯಿತ ಗ್ರಾಹಕರಾಗಿರುವದಿಲ್ಲವಾದ್ದರಿಂದ, ಉಳಿದ ಸ್ಥಾವರಗಳಿಗೆ ಸಂಬಂಧಿಸಿದಂತೆ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ದೂರು ದಾಖಲಿಸಲು ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರಿಗೆ ಯಾವುದೇ ಅಧಿಕಾರ ಅಥವಾ ಹಕ್ಕು ಇರುವದಿಲ್ಲ. ಆದ್ದರಿಂದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರು ದಾಖಲಿಸಿದ NIP-34220 ರ ಹೊರತುಪಡಿಸಿ ನೋಂದಾಯಿತ ಗ್ರಾಹಕರಲ್ಲದ ಉಳಿದ ಸ್ಥಾವರಗಳಿಗೆ ಸಂಬಂಧಿಸಿದ ದೂರಿನ ವಿಚಾರಣೆಗೆ ಅವಕಾಶವಿರುವುದಿಲ್ಲ. ಈ ಬಗ್ಗೆ ಗೌರವಾನ್ವಿತ ವಿದ್ಯುತ್ ಲೋಕಪಾಲರು Case No.OMB/B/G-363/2019, ದಿನಾಂಕ: 18.11.2020 *Sri. K.S Ravikumar V/s Assistant Executive Engineer(Elec), BESCOM, Bengaluru & Others* ಪ್ರಕರಣದಲ್ಲಿ ಆದೇಶ ಹೊರಡಿಸಿರುವ ಪೂರ್ವ ನಿದರ್ಶನ (precedence) ಇರುತ್ತದೆ. ಸದರಿ ತೀರ್ಪಿನ ಉದ್ಧೃತ ಭಾಗ ಈ ಕೆಳಗಿನಂತಿದೆ.

.........

13) Before considering this contention, I would like to refer Section 2 (g) and (h) of KERC (CGRF & Ombudsman) Regulations 2004 which reads as under: -

*2(g) 'Complaint' means any grievance made by a consumer with regard to supply of electricity by the licensee, provided that grievance falling within the purview of any of the following provisions of the Act are excluded from the jurisdiction of the Forum:*

*(4) unauthorized use of electricity as provided under section 126 of the Act*

*(5) offences and penalties as provided under section 135 to 139 of the Act*

*(6) accident in the distribution, supply or use of electricity as provided under Section 161 of the Act.*

*2 (h) 'Consumer' means any person who is supplied with electricity for his own use by a licensee under the Act or any other law for the time being in force and includes any person whose premises are for the time being connected for the purpose of receiving electricity with the works of a licensee.*

14) On conjoint reading of the definitions referred supra makes it clear that a consumer means any person who is supplied with electricity for his own use by a Licensee under the Electricity Act or other Regulations. Admittedly in this case Smt. K.A. Neetravathi in whose name the above said installation was transferred by the Respondent No. 1, who is the registered consumer. No installation was serviced or connected in the name of the Appellant at Kailash Apartments constructed by the BDA. In order to show that the Appellant is a consumer as defined under the above said regulation the Appellant did not produced any material before this authority. In the absence of such material the documentary evidence produced in this case clearly proves that Smt. K.A Neethravathi is a registered consumer under Respondent No. 1. Section 2 (g) of the above said regulations makes it clear that any grievance made by a consumer with regard to supply of electricity by the licensee company, a complaint can be filed before the CGRF. Admittedly, the records produced in this case makes it clear that the registered consumer is Smt. K.A Neethravathi who did not filed any 13 complaint before the CGRF Bengaluru Urban. The Appellant Sri. K.S Ravikumar who claims to be the husband of Smt. K.A Neethravathi filed the complaint assuming himself that he is a Therefore, the Appellant who filed the complaint before the CGRF claiming himself as a consumer had no locus standy or he is not an

aggrieved person to file such complaint, accordingly the very complaint filed before the CGRF by the Appellant who is not the registered consumer is not maintainable. Therefore, the appeal filed by the Appellant challenging the order of the CGRF Bengaluru Urban before this authority is also not maintainable, on this count alone the appeal and the complaint filed by the Appellant before this authority and before the CGRF respectively are liable to be dismissed.

.........

ಗೌರವಾನ್ವಿತ ವಿದ್ಯುತ್ ಲೋಕಪಾಲರು Case No.OMB/H/G-422/2021, ದಿನಾಂಕ: 20.04.2021 *Sri. Abdul Ajij V/s Assistant Executive Engineer(Elec) & Others* ಪ್ರಕರಣದಲ್ಲಿ ನೀಡಿದ ಆದೇಶದಲ್ಲಿಯೂ (Para-10 ರಿಂದ 13) ಸಹ ನೋಂದಾಯಿತ ಗ್ರಾಹಕರಲ್ಲದವರು ಸಲ್ಲಿಸಿದ ಮನವಿಯನ್ನು ವಜಾಗೊಳಿಸಿ ಆದೇಶಿಸಿರುತ್ತಾರೆ.

ಈ ಮೇಲಿನ ಕಾರಣಕ್ಕಾಗಿ ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ಹೆಸರಿನಲ್ಲಿರುವ ಸ್ಥಾವರ ಸಂಖ್ಯೆ: NIP-34220 ರ ದೂರಿನ ಬಗ್ಗೆ ಮಾತ್ರ ವೇದಿಕೆಯು ಪರಿಶೀಲಿಸಲು ಅವಕಾಶವಿರುತ್ತದೆ.

2.

- ಅರ್ಜಿದಾರರಾದ ಶ್ರೀ ಗಣೇಶ ಪರಮೇಶ್ವರ ಹೆಗಡೆ ರವರು ದಿನಾಂಕ: 04.11.2021 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ, ಹೊನ್ನಾವರ ರವರ ಕಛೇರಿಗೆ ದೂರನ್ನು ನೀಡಿ NIP-23, NL-68 ಹಾಗೂ NIP-34220 ಕ್ಕೆ ವಿದ್ಯುತ್ ಸಂಪರ್ಕ ನೀಡಲು ಮನವಿ ನೀಡಿರುತ್ತಾರೆ ಹಾಗೂ ಆ ನಂತರದಲ್ಲಿ NIP-23, NL-68 ಹಾಗೂ NIP-34220 ಕ್ಕೆ ವಿದ್ಯುತ್ ಸಂಪರ್ಕ ನೀಡಲು ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ, ಹೊನ್ನಾವರ ರವರಿಗೆ ದಿನಾಂಕ: 13.12.2021 ರಂದು ಮನವಿ ನೀಡಿರುತ್ತಾರೆ. ಆದರೆ ದೂರುದಾರರು ನಮೂನೆ-ಎ ದೂರು ಅರ್ಜಿಯಲ್ಲಿ ದಿನಾಂಕ: 13.12.2022 ಎಂದು ತಪ್ಪಾಗಿ ದಾಖಲಿಸಿರುತ್ತಾರೆ. ದೂರು, ದಿನಾಂಕ: 13.10.2022 ರಂದು CGRF ನಲ್ಲಿ ಸ್ವೀಕೃತವಾಗಿದ್ದರಿಂದ ದೂರುದಾರರು ನಮೂನೆ-ಎ ರಲ್ಲಿ 'ದಿನಾಂಕ: 13.12.2022' ಎಂದು ದಾಖಲಿಸಿದ್ದು ತಪ್ಪಾಗಿರುತ್ತದೆ. NIP-23 & NIP-34220 ವಿದ್ಯುತ ಸಂಪರ್ಕ ನೀಡುವ ಲೈನ್ ಮೊದಲಿನಂತೆ ಮುರಿದ ಕಂಬ ಸರಿಪಡಿಸಿ ಸರಿಯಾಗಿ ಮೂರು ಲೈನ್ ನೀಡಲು ಹಾಗೂ ಕಳೆದ 10 ವರ್ಷದಿಂದ ವಿನಾ ಕಾರಣ ವಿದ್ಯುತ್ ಸಂಪರ್ಕ ಕಡಿದಿಟ್ಟ NL-68 ಕ್ಕೆ ವಿದ್ಯುತ್ ಸಂಪರ್ಕ ನೀಡುವಂತೆ ದಿನಾಂಕ: 04.11.2021 ಹಾಗೂ ದಿನಾಂಕ: 13.11.2021 ರ ಮನವಿಯಲ್ಲಿ ದೂರುದಾರರರು ಕೋರಿರುತ್ತಾರೆ.

- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ ರವರ ಕಚೇರಿಯಿಂದ ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ॥ ಹೊನ್ನಾವರ ರವರಿಗೆ ಪತ್ರ ಸಂಖ್ಯೆ: ಹೊನ್ನಾವರ/ಸಕಾನಿಇಂ(ವಿ)/ಕಂದಾಯ/14481, ದಿನಾಂಕ: 24.03.2022 ರಲ್ಲಿ ಪತ್ರ ಬರೆದು, ಜಾಗೃತದಳದವರು ಕಂಡು ಹಿಡಿದ ಹಿಂಬಾಕಿ ಮೊತ್ತ

ರೂ. 5,500.00 ನ್ನು ಪಾವತಿಸಲು ಸೂಚಿಸಿ ಒಂದು ವೇಳೆ ಗ್ರಾಹಕರ ಆಕ್ಷೇಪಣೆ ಇದ್ದಲ್ಲಿ 15 ದಿನಗಳೊಳಗಾಗಿ ಹಿಂದಾಕರಣೆ ಮೊತ್ತದ ಶೇ. 50% ರಷ್ಟು ಹಣ ಪಾವತಿ ಮಾಡಲು ತಿಳಿಸಿರುತ್ತಾರೆ. ಆದರೆ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರು ದಿನಾಂಕ: 13.10.2022 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

Karnataka Electricity Regulatory Commission (Consumer Grievance Redressal Forum and Ombudsman) (Second Ammendment) Regulations 2013 ರ ನಿಬಂಧನೆ **6.1** ಈ ಕೆಳಗಿನಂತಿದೆ.

> 6.1 In the event of a complaint not being redressed within the time limit as provided in the **KERC (Consumer Complaint Handling Procedure) Regulations 2004, and KERC (Licensees' Standards of Performance) Regulations, 2004, complainant may submit his grievance to the Forum within THREE (3)** months from the date on which his grievance should have been redressed.
>
> **Provided that the Forum may for sufficient cause condone the delay in filing the complaint.**

ಈ ಮೇಲೆ ತಿಳಿಸಿದ ನಿಬಂಧನೆ 6.1 ರ ಪ್ರಕಾರ ಗ್ರಾಹಕರ ದೂರು ಪರಿಹಾರವಾಗದಿದ್ದಲ್ಲಿ, ಲೈಸೆನ್ಸಿಗೆ ದೂರು ದಾಖಲಿಸಿದ ಮೂರು ತಿಂಗಳ ಒಳಗಾಗಿ ವೇದಿಕೆಗೆ ದೂರನ್ನು ಸಲ್ಲಿಸತಕ್ಕದ್ದು. ಪರಂತು, ವೇದಿಕೆಯು, ಸಕಾರಣಗಳಿದ್ದಲ್ಲಿ, ತಡವಾಗಿ ಸಲ್ಲಿಸಲ್ಪಟ್ಟ ದೂರುಗಳನ್ನು ಸ್ವೀಕರಿಸಬಹುದು.

ದೂರುದಾರರು/ಗ್ರಾಹಕರು ಕ್ರಮವಾಗಿ ದಿನಾಂಕ: 04.11.2021 ಹಾಗೂ ದಿನಾಂಕ: **13.12.2021** ರಂದು ಲೈಸೆನ್ಸಿ/ಪ್ರತಿವಾದಿಗೆ ದೂರು ದಾಖಲಿಸಿದ್ದು ದಿನಾಂಕ: 13.10.2022 ರಂದು ವೇದಿಕೆಗೆ ದೂರು ದಾಖಲಿಸಿರುತ್ತಾರೆ. ಅಂದರೆ ದಿನಾಂಕ: 13.12.2021 ನ್ನು ಪರಿಗಣಿಸಿದಾಗ ದೂರುದಾರರಾದ ಹಾಗೂ ಸ್ಥಾವರ ಸಂಖ್ಯೆ: NIP-34220 ರ ನೋಂದಾಯಿತ ಗ್ರಾಹಕರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ದೂರು 07 ತಿಂಗಳು 01 ದಿನಗಳಷ್ಟು ವಿಳಂಬವಾಗಿ ಸ್ವೀಕೃತವಾಗಿದೆ. ದೂರು ಅರ್ಜಿಯಲ್ಲಾಗಲಿ, ವೇದಿಕೆಯ ಮುಂದೆ ಹೇಳಿಕೆ ನೀಡುವಲ್ಲಾಗಲಿ ದೂರುದಾರರು ದೂರು ಸಲ್ಲಿಸುವಲ್ಲಾದ ವಿಳಂಬಕ್ಕೆ ಯಾವುದೇ ಕಾರಣ ನೀಡಿರುವದಿಲ್ಲ.

3. ಜಕಾತಿ ದುರುಪಯೋಗದ ಕುರಿತು (misuse of electricity) ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ಹೆಸರಿನಲ್ಲಿರುವ ಸ್ಥಾವರ ಸಂಖ್ಯೆ: NIP-34220 ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಜಾಗೃತ ದಳ, ಹೆಸ್ಕಾಂ, ಕಾರವಾರ ರವರು ಅಸಂಜ್ಞಾ ಪ್ರಕರಣ ಕ್ರಮ ಸಂಖ್ಯೆ: 7/22 ನ್ನು ದಿನಾಂಕ: 19.01.2021 ರಂದು ದಾಖಲಿಸಿರುತ್ತಾರೆ. ಸದರಿ ಪ್ರಕರಣವು KERC CoS ನ Clause 42.02 (Misuse of Electricity) ಹಾಗೂ Electricity Act 2003 ರ Section 126 ರಡಿ ಬರುತ್ತದೆ.

Electricity Act 2003 ರ Section 126 ರ ಉದ್ಧೃತ ಭಾಗ ಈ ಕೆಳಗಿನಂತಿರುತ್ತದೆ.

> 126. Assessment
>
> Explaination.- For the purposes of this section,-
> …..
>
> (b) unauthorised use of electricity means the usage of electricity
>
> (i) by any artificial means; or
> (ii) by a means not authorised by the concerned person or authority or licensee; or
> (iii) through a tampered meter; or
> (iv) **for the purpose other than for which the usage of electricity was authorised**

[ಒತ್ತು ನೀಡಲಾಗಿದೆ]

KERC (CGRF & Ombudsman) Regulations 2004 ರ Section 2(g) ಈ ಕೆಳಗಿನಂತಿರುತ್ತದೆ.

> 2 (g) *'Complaint' means any grievance made by a consumer with regard to supply of electricity by the licensee, provided that grievance falling within the purview of any of the following provisions of the Act are excluded from the jurisdiction of the Forum:*
>
> *(1) unauthorized use of electricity as provided under section 126 of the Act*
> *(2) offences and penalties as provided under section 135 to 139 of the Act*
> *(3) accident in the distribution, supply or use of electricity as provided under Section 161 of the Act.*

ಈ ಮೇಲೆ ತಿಳಿಸಿದ KERC (CGRF & Ombudsman) Regulations 2004 ರ Section 2(g) ಪ್ರಕಾರ ಸ್ಥಾವರ ಸಂಖ್ಯೆ: NIP-34220 ಗೆ LT-4 ರಿಂದ LT-7 ಜಕಾತಿಗೆ ವಿದ್ಯುತ್ ದುರ್ಬಳಕೆ ಪ್ರಕರಣದ ವಿಚಾರಣೆಯು CGRF ಅಧಿಕಾರ ವ್ಯಾಪ್ತಿಯಲ್ಲಿ ಬರುವದಿಲ್ಲವೆಂದು ಗೌರವಾನ್ವಿತ ವಿದ್ಯುತ್ ಲೋಕಪಾಲರು Case No. *OMB/B/G-297/2018, Dated: 19/07/2018, Sri M.S.Gnansambandan Bengaluru V/s AEE(Ele), O & M E-6 Subdivision, BESCOM, Bengaluru*, Case No. *OMB/B/G-396/2020, Dated: 09/09/2020, Sri Bhopal Reddy Bengaluru V/s Chairperson, CGRF Bengaluru Urban District, Superintending Engineer(Ele), West Circle Office, BESCOM Bengaluru, AEE(Ele), O & M S-17 Sub-Division, BESCOM, Bengaluru* ಹಾಗೂ Case No. *OMB/B/G-435/2021, Dated: 09/12/2021, Smt.L.Vijaylaxmi V/s AEE(Ele), O & M N-8 Subdivision, BESCOM, Bengaluru* ಪ್ರಕರಣಗಳಲ್ಲಿ ಆದೇಶ ಹೊರಡಿಸಿರುವ ಪೂರ್ವ ನಿದರ್ಶನ (**Precedence**)ಇರುತ್ತದೆ.

4.

- 2010 ನೇ ಇಸವಿಯಲ್ಲಿ ಶ್ರೀ. ಕಾಶಿನಾಥ ಭಾಗ್ವತ ಇವರು ತಮ್ಮ ಜಾಗದ ಮೇಲಿಂದ ಶ್ರೀ. ಪರಮೇಶ್ವರ ಗಣೇಶ ಹೆಗಡೆ ಇವರ ಸ್ಥಾವರಗಳಿಗೆ ಸಂಪರ್ಕಿತವಾಗಿದ್ದ 3 ಫೇಸ್ 4 ವಾಯರ್ ವಿದ್ಯುತ್ ಮಾರ್ಗವನ್ನು ಸ್ವಯಂಕಾರ್ಯತದ ಯೋಜನೆಯಡಿಯಲ್ಲಿ ಶ್ರೀ. ಕಾಶಿನಾಥ ಭಾಗ್ವತ ಅವರದೇ ಜಾಗದಲ್ಲಿ ಸ್ಥಳಾಂತರ ಮಾಡಿಸಲು ಅಂದಾಜು ಪಟ್ಟಿ ಮಂಜೂರು ಮಾಡಿಕೊಂಡು ಗುತ್ತಿಗೆದಾರರ ಮೂಲಕ ಕೆಲಸ ಮಾಡಿಸುವಾಗ ಶ್ರೀ. ಪರಮೇಶ್ವರ ಗಣೇಶ ಹೆಗಡೆ ರವರು ತಕರಾರು ಮಾಡಿದ್ದರಿಂದ, ಸ್ಥಳಾಂತರದ ಸಲುವಾಗಿ ಕಳಚಿದ ವಿದ್ಯುತ್ ಮಾರ್ಗವನ್ನು ಅಳವಡಿಸಲಾಗದೇ ಕಾಮಗಾರಿ ಅಪೂರ್ಣವಾಗಿ ಉಳಿದಿರುತ್ತದೆ. ನಂತರದಲ್ಲಿ ಕೋಟೆಡ್ ಸರ್ವಿಸ್ ವಾಯರ್ ಎಳೆದು ಶ್ರೀ. ಪರಮೇಶ್ವರ ಗಣೇಶ ಹೆಗಡೆ ಇವರ ಸ್ಥಾವರಗಳಿಗೆ ವಿದ್ಯುತ ಸಂಪರ್ಕ ನೀಡಲಾಗಿರುತ್ತದೆ.
- 2014 ನೇ ಇಸವಿಯಲ್ಲಿ ಮೊದಲಿದ್ದ ರೀತಿಯಲ್ಲೇ ತಮ್ಮ ಜಾಗದ ಮೇಲಿಂದ ವಿದ್ಯುತ ಮಾರ್ಗ ಎಳೆಯಬಹುದೆಂದು ಊಹಿಸಿ ಆ ರೀತಿ ಮಾರ್ಗ ಎಳೆಯುವದನ್ನು ತಡೆಯಲು ಶ್ರೀ ಕಾಶೀನಾಥ ಭಾಗ್ವತ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಹೆಸ್ಕಾಂ., ಹೊನ್ನಾವರ, ಪ್ರಧಾನ ವ್ಯವಸ್ಥಾಪಕರು ಹೆಸ್ಕಾಂ., ಹುಬ್ಬಳ್ಳಿ ಹಾಗೂ ಇತರರ ವಿರುದ್ಧ ಹೊನ್ನಾವರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾವಾ ಹೂಡಿದ್ದು ಪ್ರಕರಣ ಸಂಖ್ಯೆ ಓ.ಎಸ್.12/2014 ಆಗಿರುತ್ತದೆ. ಸದ್ರಿ ದಾವೆಗೆ ಸಂಬಂಧಿಸಿದಂತೆ ಶ್ರೀ ಕಾಶೀನಾಥ ಭಾಗ್ವತ (plaintiff) ಮಾಡಿರುವ claim ನ್ನು ಹಾಗೂ ಶ್ರೀ. ಪರಮೇಶ್ವರ ಗಣೇಶ ಹೆಗಡೆ & ಶ್ರೀ ಗಣೇಶ ಪರಮೇಶ್ವರ ಹೆಗಡೆ (defendants) ಇವರು ಮಾಡಿರುವ counter claim ನ್ನು ತೊಡೆದು ಹಾಕಲಾಗಿರುತ್ತದೆ.
- ನಂತರ ದಿನಾಂಕ: 19.07.2019 ರಂದು ಶ್ರೀ ಕಾಶೀನಾಥ ಭಾಗ್ವತರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪವಿಭಾಗ, ಹೆಸ್ಕಾಂ., ಹೊನ್ನಾವರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ., ಹುಬ್ಬಳ್ಳಿ ಹಾಗೂ ಇತರರ ವಿರುದ್ಧ ಹೊನ್ನಾವರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ರೆಗ್ಯುಲರ್ ಅಪೀಲ್ ದಾವಾ ಹೂಡಿದ್ದು ಪ್ರಕರಣ ಸಂಖ್ಯೆ ಆರ್.ಎ/05/2019 ಆಗಿದ್ದು ವಿಚಾರಣಾ ಹಂತದಲ್ಲಿರುತ್ತದೆ.
- ಸದರಿ ಪ್ರಕರಣವನ್ನು (RA/No.-5/2019) ವಕೀಲರಾದ ಶ್ರೀ. ಕೆ. ಎಸ್. ಭಟ್, ಇವರು ಹೆಸ್ಕಾಂ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದು ಪ್ರಕರಣವು ನ್ಯಾಯಾಲಯದ ಮುಂದೆ ಇತ್ಯರ್ಥಕ್ಕೆ ಇದ್ದು ಹಾಗೂ ಅಂತಿಮ ವಾದಕ್ಕೆ ಬಾಕಿ ಇರುವದರಿಂದ ಸದರಿ ಜಾಗದಲ್ಲಿ ವಿದ್ಯುತ್ ಮಾರ್ಗದ ಸ್ಥಿತಿಯನ್ನು ಯಥಾ ಸ್ಥಿತಿ ಕಾಯ್ದುಕೊಂಡು ಹೋಗುವುದು ಸೂಕ್ತ ಎಂದು ಕಾನೂನು ಸಲಹೆ ನೀಡಿರುತ್ತಾರೆ.

5. ದೂರುದಾರರು ದೂರು ನಮೂನೆ-ಎ ದಲ್ಲಿ ಈ ಕೆಳಗಿನಂತೆ ಘೋಷಣೆ ನೀಡಿರುತ್ತಾರೆ.

1. ಈ ಮೇಲೆ ಒದಗಿಸಿರುವ ಮಾಹಿತಿಯು ನನ್ನ ಅತ್ಯುತ್ತಮ ತಿಳುವಳಿಕೆ ಮಾಹಿತಿ ಮತ್ತು ನಂಬಿಕೆಯಂತೆ ಇದೆ.
2. ಈ ಮೇಲೆ ಹೇಳಿದ ಕಾಲಂಗಳು ಲಗತ್ತಿಸಿರುವ ದಸ್ತಾವೇಜುಗಳಲ್ಲಿ ಯಾವುದೇ ಮಾಹಿತಿಯನ್ನು ನಾನು ಮರೆಮಾಚಿಲ್ಲ ಅಥವಾ ತಪ್ಪಾಗಿ ಹೇಳಿರುವದಿಲ್ಲ.
3. ಇದೇ ವಿಷಯದ ಬಗ್ಗೆ ಈ ಹಿಂದೆ ನಾನು/ನಾವು ವೇದಿಕೆಗೆ ಯಾವುದೇ ದೂರನ್ನು ನೀಡಿಲ್ಲ.
4. ಹಾಲಿ ನೀಡಿರುವ ದೂರಿನ ಬಗ್ಗೆ ಯಾವುದೇ ವೇದಿಕೆ ನ್ಯಾಯಾಲಯ/ಮಧ್ಯಸ್ತಿಕೆ/ಪ್ರಾಧಿಕಾರ ನಿರ್ಣಯ ನೀಡಿಲ್ಲ.

ಆದರೆ ಈ ಮೇಲೆ ತಿಳಿಸಿದಂತೆ ವಿವಿದ ನ್ಯಾಯಾಲಯಗಳಲ್ಲಿ ಅಂದರೆ (1) DISTRICT CONSUMERS DISPUTE REDRESSAL FORUM, UTTAR KANNADA, AT KARWAR CC No. 137/2010 *Parameshwar Ganesh Hegde, At: Neelkodi, Honnavar V/s The Assistant Executive Engineer, HESCOM, Prabhatnagar, Honnavar*, (2) KARNATAKA STATE CONSUMER DISPUTES REDRESSAL COMMISSION BANGALORE, Appeal No.2220/2011 *Parameshwar Ganesh Hegde V/s AEE(Ele), HESCOM, Honnavar & Kashinath Govind Bhagwat*, (3) In the Court of SENIOR CIVIL JUDGE AND J.M.F.C COURT HONNAVAR, UTTARA KANNADA R.A.No. : 5/2019 *Kashinath Govind Bhagwat V/s AEE(Ele), HESCOM, Honnavar & Others,* (4) IN THE COURT OF THE PRL. CIVIL JUDGE, HONNAVAR O.S.No.9/2022 *Ganesh Parameshwar Hegde V/s Kashinath Govind Bhagwat* ಹಾಗೂ (5) IN THE COURT OF Addl.CIVIL JUDGE & J.M.F.C, AT HONNAVAR O.S.No.12/2014 *Kashinath Govind Bhagwat V/s AEE(Ele), HESCOM, Honnavar & Others* ರಲ್ಲಿ ಪ್ರಕರಣಗಳು ದಾಖಲಾಗಿದ್ದನ್ನು ಗಮನಿಸಲಾಯಿತು. ಶ್ರೀ. ಕಾಶೀನಾಥ ಗೋವಿಂದ ಭಾಗ್ವತ ರವರು ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ವಿರುದ್ಧ In the Court of SENIOR CIVIL JUDGE AND J.M.F.C COURT HONNAVAR ದಲ್ಲಿ ದಾಖಲಾಗಿರುವ O.S.No. 12/2014 ರ ತೀರ್ಪಿಗೆ ಸಂಬಂಧಿಸಿದಂತೆ ದಾಖಲಿಸಿದ ಮೇಲ್ಮನವಿ ಸಂಖ್ಯೆ: RA/5/2019 ಪ್ರಸ್ತುತ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹೊನ್ನಾವರ ರವರು ನ್ಯಾಯಾಲಯದಲ್ಲಿ ವಿಚಾರಣೆಗೆ ಇರುತ್ತದೆ. ಈ ವಿಷಯವನ್ನು ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರು ನಮೂನೆ-ಎ ರಲ್ಲಿ ಸಲ್ಲಿಸಿದ ದೂರಿನಲ್ಲಿ ಮರೆಮಾಚಿರುತ್ತಾರೆ.

6. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ ಹೊನ್ನಾವರ ರವರ ಹೇಳಿಕೆಯಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.


"ಶ್ರೀ. ಗಣೇಶ ಪರಮೇಶ್ವರ ಹೆಗಡೆ ಇವರಿಗೆ ಸಂಬಂಧಿಸಿದ ಆವರಣದಲ್ಲಿ ಹಾಲಿ ಎರಡು ನೀರಾವರಿ ಪಂಪ್ ಸ್ಥಾವರಗಳಿಗೆ ವಿದ್ಯುತ ಸಂಪರ್ಕವಿರುತ್ತದೆ. ಹಾಲಿ NIP-34220 & NIP-23 ಸ್ಥಾವರ ಸಮೀಪ ಇರುವ ಕಂಬಕ್ಕೆ ರಸ್ತೆ ಪಕ್ಕದಲ್ಲಿರುವ ಕಂಬದಿಂದ ಸುಮಾರು 80 ಮೀ ಅಂತರವಿದ್ದು ಕೋಟೆಡ್ ವಾಯರ್ ಮೂಲಕ ಸಂಪರ್ಕವಿರುತ್ತದೆ. ಸದ್ರಿ ಕೋಟೆಡ್ ವಾಯರ್ ಹಳೆಯದಾಗಿದ್ದು, ಹಲವಾರು ಜೋಡಣೆಗಳನ್ನು ಹೊಂದಿದ್ದು ಪದೇ ಪದೇ ವಿದ್ಯುತ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುತ್ತದೆ ಎಂದು ಗ್ರಾಹಕರು ದೂರಿದ್ದು ಸರಿಪಡಿಸಲು ಕೋರಿರುತ್ತಾರೆ.

ಸದ್ರಿ ಕೋಟೆಡ್ ಸರ್ವಿಸ್ ವಾಯರ್ ಶ್ರೀ. ಗಣೇಶ ಹೆಗಡೆ ಹಾಗೂ ಅವರ ನೆರೆಯವರಾದ ಶ್ರೀ. ಕಾಶೀನಾಥ ಭಾಗ್ವತ ಇವರ ಗಡಿಯ ಮೇಲೆ ಹಾದು ಹೋಗಿದ್ದು ಸ್ಥಳವು ಸಂಪೂರ್ಣ ಮರಗಳಿಂದ ಆವೃತವಾಗಿರುತ್ತದೆ. ಸದ್ರಿ ಸ್ಥಳದಲ್ಲಿ ಇರುವ ಇಬ್ಬರಿಗೂ ಸಂಬಂಧಿಸಿದ ಮರಗಳನ್ನು ಕಡಿದು ಖುಲ್ಲಾಪಡಿಸಿದಲ್ಲಿ ಮಾತ್ರ, ಒಂದು ಮಧ್ಯಂತರ ಕಂಬ ನಿಲ್ಲಿಸಿ ವೀಸಲ್ ವಾಹಕ ಎಳೆದು ಶ್ರೀ. ಗಣೇಶ ಹೆಗಡೆ ಅವರ ನೀರಾವರಿ ಸ್ಥಾವರಕ್ಕೆ ಕೋಟೆಡ್ ವಾಯರ್ ಬದಲು ವೀಸಲ್ ವಾಹಕದ ಮೂಲಕ ವಿದ್ಯುತ ಪೂರೈಕೆ ಮಾಡಲು

ಸಾಧ್ಯವಿರುತ್ತದೆ. ಅದರಲ್ಲೂ ಶ್ರೀ. ಗಣೇಶ ಹೆಗಡೆ ಇವರು ಹೊಸದಾಗಿ ಮನೆ ನಿರ್ಮಾಣ ಮಾಡುತ್ತಿದ್ದು ಸದ್ರಿ ವಿದ್ಯುತ ಮಾರ್ಗ ಕಟ್ಟಡದ ಸಮೀಪದಿಂದ ಹಾದು ಹೋಗಬೇಕಾಗಿದ್ದು ಕಟ್ಟಡದಿಂದ ಇರಬೇಕಾದ ಕನಿಷ್ಟ ಅಂತರ ಪಾಲಿಸಲು ಸಮಸ್ಯೆ ಇರುತ್ತದೆ. ದೂರುದಾರರು ಸುಮಾರು 12 ವರ್ಷಗಳ ಹಿಂದೆ ಅವರ ತಂದೆಯ ಕಾಲದಲ್ಲಿ ವಿದ್ಯುತ ಮಾರ್ಗ ಹೇಗಿತ್ತೋ ಅದೇ ರೀತಿ ಮಾರ್ಗ ಎಳೆಯಲು ಕೋರಿರುವುದು ಸಮಂಜಸವಾಗಿರುವುದಿಲ್ಲ. NIP-34220 & NIP-23 ಸ್ಥಾವರಗಳ ಸಂಪರ್ಕಕ್ಕೆ ವಿದ್ಯುತ ಲೈನ್ ಎಳೆಯುವ ಬಗ್ಗೆ ಶ್ರೀ. ಕಾಶೀನಾಥ ಭಾಗ್ವತ ಇವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಹಾಗೂ ಸದ್ರಿ ಪ್ರಕರಣ RA/5/2019 ವಿಚಾರಣಾ ಹಂತದಲ್ಲಿದ್ದು, ದಾವೆ ಇತ್ಯರ್ಥವಾಗುವವರೆಗೆ ಸದ್ರಿ ಸ್ಥಳದಲ್ಲಿ ವಿದ್ಯುತ ಮಾರ್ಗಕ್ಕೆ ಸಂಬಂಧಪಟ್ಟಂತೆ ಯಥಾ ಸ್ಥಿತಿ ಕಾಯ್ದುಕೊಳ್ಳಲು ಹೆಸ್ಕಾಂ ವಕೀಲರು ಸಲಹೆ ನೀಡಿರುತ್ತಾರೆ.

ಆದ ಕಾರಣ ಹಾಲಿ ಇರುವ ಸುಮಾರು 80 ಮೀ ಉದ್ದವಾಗಿರುವ ಕೋಟೆಡ್ ವಾಯರ್‌ನಿಂದ ಗ್ರಾಹಕರಿಗೆ ವಿದ್ಯುತ ಪೂರೈಕೆಯಲ್ಲಿ ಸಮಸ್ಯೆ ಆಗುತ್ತಿರಬಹುದಾಗಿರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಶ್ರೀ. ಗಣೇಶ ಪರಮೇಶ್ವರ ಹೆಗಡೆ ಇವರ ಜಾಗದ ಗೇಟಿನ ಎದುರಿಗೆ ಇರುವ ಎಲ್.ಟಿ. ಕಂಬದಿಂದ ಟ್ಯಾಪ ಮಾಡಿಕೊಂಡು ಅವರದೇ ಜಾಗದಲ್ಲಿ ಅಗತ್ಯವಿರುವ ವಿದ್ಯುತ ಕಂಬಗಳನ್ನು ಅಳವಡಿಸಿ ವೀಸಲ್ ವಾಹಕ ಎಳೆದು ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ಹೆಸರಿನಲ್ಲಿರುವ ಸ್ಥಾವರ NIP-34220 ಕ್ಕೆ ಜಾಗೃತದಳದವರು ವಿಧಿಸಿದ ದಂಡ ರೂ. 5500.00 ಪಾವತಿಸುವ ಷರತ್ತಿಗೊಳಪಟ್ಟು ವಿದ್ಯುತ ಸಂಪರ್ಕ ನೀಡುವುದು ಸೂಕ್ತ ಎಂದು ಕಂಡುಬಂದಿರುತ್ತದೆ. ಈ ರೀತಿ ಅಳವಡಿಸುವ ಕಂಬದಿಂದ ಸ್ಥಾವರ ಸಂಖ್ಯೆ: NIP-23 ಕ್ಕೂ ಸಹ ವಿದ್ಯುತ್ ಸಂಪರ್ಕ ನೀಡಬಹುದಾಗಿದೆ. ಪ್ರಸ್ತಾಪಿಸಿರುವ ವಿದ್ಯುತ್ ಮಾರ್ಗದ ನಕ್ಷೆಯನ್ನು ಅನುಬಂಧ-6.5 ಎಂದು ಲಗತ್ತಿಸಲಾಗಿದೆ. ಅದರಂತೆ ಈ ಮೇಲೆ ತಿಳಿಸಿರುವ ಅಂಶಗಳಿಗನುಗುಣವಾಗಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಉಪವಿಭಾಗಾಧಿಕಾರಿಗಳಿಗೆ ಉಲ್ಲೇಖಿತ ಪತ್ರ-2 ರಲ್ಲಿ ಸೂಚನೆ ನೀಡಲಾಗಿರುತ್ತದೆ."

ಪ್ರಸ್ತಾಪಿಸಿರುವ ವಿದ್ಯುತ್ ಮಾರ್ಗದ ನಕ್ಷೆ ಈ ಕೆಳಗಿನಂತಿರುತ್ತದೆ.



**ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ ಹೊನ್ನಾವರ ರವರು ಸ್ಥಾವರ ಸಂಖ್ಯೆ ಎನ್.ಐ.ಪಿ–34220 ಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ–ವಿಭಾಗ, ಹೆಸ್ಕಾಂ ಹೊನ್ನಾವರ ರವರಿಗೆ ಈ ಕೆಳಗಿನಂತೆ ಪತ್ರ ಬರೆದಿರುತ್ತಾರೆ.**

**ಉಲ್ಲೇಖಿತ ಪತ್ರ–2**

ಪತ್ರ ಸಂಖ್ಯೆ: ಹೊನ್ನಾವರ/ಕಾ.ನಿ.ಇಂ/ಸಕಾನಿಇಂ(ಕ)/2022–23/12699 ದಿನಾಂಕ: 09.12.2022

ರಿಗೆ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ & ಪಾಲನಾ ಉಪವಿಭಾಗ
ಹು.ವಿ.ಸ.ಕಂ.ನಿ. ಹೊನ್ನಾವರ

ಮಾನ್ಯರೇ,

ವಿಷಯ: ಸ್ಥಾವರ ಸಂಖ್ಯೆ ಎನ್.ಐ.ಪಿ–34220 ಕ್ಕೆ ಸಂಬಂಧಿಸಿದಂತೆ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಅರ್ಜಿ ಸಲ್ಲಿಸಿರುವ ಪ್ರಕರಣ ಸಂಖ್ಯೆ: 35/2022 ರ ಬಗ್ಗೆ

**ಉಲ್ಲೇಖ:**
1. ಅ.ಇಂ.ಶಿರಸಿ ರವರ ಪ.ಸಂ.ಅ.ಇಂ(ವಿ)/ಉಲೆನಿ/ಹಿಸ–2/ಕ–ಸಿ.ಜಿ.ಆರ್.ಎಫ್/2022–23/10997, ದಿ.–30.11.2022.
2. ನಿಮ್ಮ ಪ.ಸಂ .ಸಕಾನಿಂ/ಹೊನ್ನಾವರ/ಸ.ಇಂ.ತಾಂ/22–23/9570, ದಿ.–19.11.2022.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸ್ಥಾವರ ಸಂಖ್ಯೆ ಎನ್.ಐ.ಪಿ–34220 ಕ್ಕೆ ಸಂಬಂಧಿಸಿದಂತೆ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಅರ್ಜಿ ಸಲ್ಲಿಸಿರುವ ಪ್ರಕರಣ ಸಂಖ್ಯೆ: 35/2022 ಕ್ಕೆ ಸಂಬಂಧಪಟ್ಟಂತೆ ಅಧೀಕ್ಷಕ ಇಂಜಿನಿಯರ್(ವಿ), ಶಿರಸಿರವರು ಮಧ್ಯಂತರ ಆದೇಶ ಹೊರಡಿಸಿದ್ದು ಈ ಕೆಳಸಹಿದಾರರಿಗೆ ಸ್ಥಳ ಪರಿಶೀಲಿಸಿ ಸ್ಥಾವರ ಸಂಖ್ಯೆ ಎನ್.ಐ.ಪಿ–34220, ಎನ್.ಆಯ್.ಪಿ–23, ಎನ್.ಎಲ್–68, ಎನ್.ಎಲ್–35 ಹಾಗೂ ಸ್ಥಳದಲ್ಲಿರುವ ಇತರೇ ಸ್ಥಾವರಗಳಲ್ಲಿ, ಸ್ಥಳದಲ್ಲಿರುವ ಮಾರ್ಗಗಳಲ್ಲಿ ಏನಾದರೂ ನ್ಯೂನ್ಯತೆಗಳಿದ್ದಲ್ಲಿ ಅಥವಾ ವಿದ್ಯುತ ಸರಬರಾಜಿನಲ್ಲಿ ಏನಾದರೂ ನ್ಯೂನ್ಯತೆಗಳಿದ್ದಲ್ಲಿ ಕಾನೂನಿಗನುಗುಣವಾಗಿ ನಿಯಮಾನುಸಾರ ಕ್ರಮ ಕೈಗೊಳ್ಳುವುದು ಎಂದು ಆದೇಶಿಸಿರುತ್ತಾರೆ.

ಅದರಂತೆ ದಿ. 08.12.2022 ರಂದು ಸದ್ರಿ ಸ್ಥಳ ಪರಿಶೀಲನೆ ಮಾಡಲಾಗಿದ್ದು ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ.

ಪ್ರಸ್ತಾಪಿತ ಸ್ಥಳದಲ್ಲಿ ಇರುವ ಸ್ಥಾವರಗಳ ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ಆರ್.ಆರ್. ಸಂಖ್ಯೆ | ಗ್ರಾಹಕರ ಹೆಸರು | ಜಕಾತಿ | ಸಂಪರ್ಕ ನೀಡಿದ ದಿನಾಂಕ | ಮಂಜೂರಾದ ಭಾರ | ಬಾಕಿ ಮೊತ್ತ | ಸ್ಥಾವರಕ್ಕೆ ವಿದ್ಯುತ ಸಂಪರ್ಕ ವಿದೆಯೇ/ಇಲ್ಲವೇ | ಷರಾ |
|---|---|---|---|---|---|---|---|---|
| 1 | ಎನ್.ಎಲ್ –35 | ಶ್ರೀ ಪರಮೇಶ್ವರ ಗಣೇಶ ಹೆಗಡೆ | ಎಲ್.ಟಿ–2(ಎ) | 20.03.1978 | 0.9 ಕಿ.ವ್ಯಾ | 1770.00 | ಇಲ್ಲ | |
| 2 | ಎನ್.ಎಲ್ –38 | ಶ್ರೀ ಪರಮೇಶ್ವರ ಗಣೇಶ ಹೆಗಡೆ | ಎಲ್.ಟಿ–2(ಎ) | 06.09.1978 | 0.12 ಕಿ.ವ್ಯಾ | 2140.00 | ಇಲ್ಲ | |

| | | | | | | | | |
|---|---|---|---|---|---|---|---|---|
| 3 | ಎನ್.ಎಲ್ –68 | ಶ್ರೀಮತಿ ಸುಬ್ಬಿ ಗಣೇಶ ಹೆಗಡೆ | ಎಲ್.ಟಿ–2(ಎ) | 05.08.1985 | 0.1 ಕಿ.ವ್ಯಾ | 0.00 | ಇಲ್ಲ | ಲಾಂಗ್ ಡಿಸ್ |
| 4 | ಎನ್.ಐ.ಪಿ –23 | ಶ್ರೀಮತಿ ಸುಬ್ಬಿ ಗಣೇಶ ಹೆಗಡೆ | ಎಲ್.ಟಿ–4(ಎ) | 24.10.1981 | 2 ಹೆಚ್.ಪಿ. | | ಇದೆ | ಕೊಳವೆ ಬಾವಿ |
| 5 | ಎನ್.ಐ.ಪಿ –34220 | ಶ್ರೀ ಗಣೇಶ ಪರಮೇಶ್ವರ ಹೆಗಡೆ | ಎಲ್.ಟಿ–4(ಎ) | 09.01.2018 | 2 ಹೆಚ್.ಪಿ | 4950.00 | ಇದೆ | ತೆರೆದ ಬಾವಿ |
| 6 | ಎನ್.ಐ.ಪಿ –17 | ಶ್ರೀ ಪರಮೇಶ್ವರ ಗಣೇಶ ಹೆಗಡೆ | ಎಲ್.ಟಿ–4(ಎ) | 04.08.1979 | 1 ಹೆಚ್.ಪಿ | 475.00 | ಇಲ್ಲ | |

1. **ಆರ್.ಆರ್.ಸಂಖ್ಯೆ ಎನ್.ಎಲ್–35**

ಸದ್ರಿ ಸ್ಥಾವರದ ಮಾಪಕವನ್ನು ಮರವೊಂದಕ್ಕೆ ಕಟ್ಟಿಡಲಾಗಿದೆ. ಸ್ಥಾವರಕ್ಕೆ ಸಂಬಂಧಿಸಿದ ಮನೆಯನ್ನು ಸಂಪೂರ್ಣವಾಗಿ ಕೆಡವಲಾಗಿದ್ದು ಹೊಸ ಮನೆಯ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಆದ ಕಾರಣ ಈ ಕೆಳಗಿನ Conditions of Supply of electricity Clause No. 4.09 (xii) ರ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಸದ್ರಿ ಸ್ಥಾವರಕ್ಕೆ ರೂ.1,770.00 ವಿದ್ಯುತ ಬಿಲ್ ಬಾಕಿ ಇರುತ್ತಿದ್ದು ಬಾಕಿ ವಸೂಲಾತಿಗೆ ಅಗತ್ಯ ಕ್ರಮ ಕೈಗೊಳ್ಳುವುದು.

<u>COS clause No. 4.09 (xii)</u>

In case of demolition & reconstruction of building existing installation shall be surrendered and agreement terminated and meter & service mains shall be removed. Only fresh service shall be arranged for the reconstructed building treating it as new building. Temporary power supply from the existing RR No shall not be arranged for construction purpose in such cases . However, this clause shall not be applied in case of addition/alternation to the existing building.

2. **ಆರ್.ಆರ್.ಸಂಖ್ಯೆ ಎನ್.ಎಲ್–68**

ಸದ್ರಿ ಸ್ಥಾವರಕ್ಕೆ ವಿದ್ಯುತ ಸಂಪರ್ಕವಿಲ್ಲವಾಗಿದ್ದು ತಮ್ಮ ಉಪವಿಭಾಗದ ಕಂದಾಯ ದಾಖಲೆಗಳಲ್ಲಿ ಪೆಬ್ರುವರಿ–2022 ರಿಂದ "ಲಾಂಗ್ ಡಿಸ್" ಎಂದು ನಮೂದಿಸಲಾಗಿರುತ್ತದೆ. ಆದ ಕಾರಣ ಕಂದಾಯ ದಾಖಲೆಗಳನ್ನು ಪರಿಶೀಲಿಸಿಕೊಂಡು Condition of Supply of electricity Clause No. 32.07, 32.08 ಅನ್ವಯ ನಿಯಮಾನುಸಾರ ಮುಂದಿನ ಪ್ರಕ್ರಿಯೆಯನ್ನು ಕೈಗೊಳ್ಳುವುದು.

3. **ಆರ್.ಆರ್.ಸಂಖ್ಯೆ ಎನ್.ಐ.ಪಿ–23**

ಸ್ಥಾನಿಕ ಪರಿಶೀಲನೆ ಸಮಯದಲ್ಲಿ ಸದ್ರಿ ಸ್ಥಾವರಕ್ಕೆ ಥ್ರೀ ಫೇಸ್ ವಿದ್ಯುತ ಸಂಪರ್ಕವಿರುವುದು ಕಂಡುಬಂದಿರುತ್ತದೆ. ಮಾಪಕದ ವಿವರ ಈ ಕೆಳಗಿನಂತಿರುತ್ತದೆ.

ತಯಾರಿಕೆ:ಕ್ಯಾಪಿಟಲ್ ಮೀಟರ್ಸ , ಕ್ರ.ಸಂ.545487 , ರೀಡಿಂಗ್:2387.2

4. **ಆರ್.ಆರ್.ಸಂಖ್ಯೆ :ಎನ್.ಐ.ಪಿ–34220**

ಸ್ಥಾನಿಕ ಪರಿಶೀಲನೆ ಸಮಯದಲ್ಲಿ ಸದ್ರಿ ಸ್ಥಾವರಕ್ಕೆ ಥ್ರೀ ಫೇಸ್ ವಿದ್ಯುತ ಸಂಪರ್ಕವಿರುವುದು ಕಂಡುಬಂದಿರುತ್ತದೆ.

ಮಾಪಕದ ವಿವರ ಈ ಕೆಳಗಿನಂತಿರುತ್ತದೆ.

ತಯಾರಿಕೆ: ಬಿ.ಹೆಚ್.ಇ.ಎಲ್ (ಸಿಂಗಲ್ ಫೇಸ್ ಮಾಪಕ), ಕ್ರ.ಸಂ.322604, ರೀಡಿಂಗ್:7949.9

ಶ್ರೀ ಗಣೇಶ ಪರಮೇಶ್ವರ ಹೆಗಡೆ ಇವರಿಗೆ ಸಂಬಂಧಿಸಿದ ಆವರಣದಲ್ಲಿ ಹಾಲಿ ಎರಡು ನೀರಾವರಿ ಪಂಪ್ ಸ್ಥಾವರಗಳಿಗೆ ವಿದ್ಯುತ ಸಂಪರ್ಕವಿರುತ್ತದೆ. ಹಾಲಿ ಎನ್.ಐ.ಪಿ–34220 & ಎನ್.ಐ.ಪಿ–23 ಸ್ಥಾವರಗಳ ಸಮೀಪ ಇರುವ ಕಂಬಕ್ಕೆ ರಸ್ತೆ ಪಕ್ಕದಲ್ಲಿರುವ ಕಂಬದಿಂದ ಸುಮಾರು 80 ಮೀ ಅಂತರವಿದ್ದು ಕೋಟೆಡ್ ವಾಯರ್ ಮೂಲಕ ಸಂಪರ್ಕವಿರುತ್ತದೆ. ಸದ್ರಿ ಕೋಟೆಡ್ ವಾಯರ್ ಹಳೆಯದಾಗಿದ್ದು, ಹಲವಾರು ಜೋಡಣೆಗಳನ್ನು ಹೊಂದಿದ್ದು ಪದೇ ಪದೇ ವಿದ್ಯುತ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುತ್ತದೆ ಎಂದು ಗ್ರಾಹಕರು ದೂರಿದ್ದು ಸರಿಪಡಿಸಲು ಕೋರಿರುತ್ತಾರೆ.

ಸದ್ರಿ ಕೋಟೆಡ್ ವಾಯರ್ ಶ್ರೀ ಗಣೇಶ ಹೆಗಡೆ ಹಾಗೂ ಅವರ ನೆರೆಯವರಾದ ಶ್ರೀ ಕಾಶೀನಾಥ ಭಾಗ್ವತ ಇವರ ಗಡಿಯ ಮೇಲೆ ಹಾದು ಹೋಗಿದ್ದು ಸ್ಥಳವು ಸಂಪೂರ್ಣ ಮರಗಳಿಂದ ಆವೃತವಾಗಿರುತ್ತದೆ. ಸದ್ರಿ ಸ್ಥಳದಲ್ಲಿ ಇರುವ ಇಬ್ಬರಿಗೂ ಸಂಬಂಧಿಸಿದ ಮರಗಳನ್ನು ಕಡಿದು ಖುಲ್ಲಾಪಡಿಸಿದಲ್ಲಿ ಮಾತ್ರ, ಒಂದು ಕಂಬ ನಿಲ್ಲಿಸಿ ವೀಸಲ್ ವಾಹಕ ಎಳೆದು ಶ್ರೀ ಗಣೇಶ ಹೆಗಡೆ ಅವರ ನೀರಾವರಿ ಸ್ಥಾವರಕ್ಕೆ ಕೋಟೆಡ್ ವಾಯರ್ ಬದಲು ವೀಸಲ್ ವಾಹಕದ ಮೂಲಕ ವಿದ್ಯುತ ಪೂರೈಕೆ ಮಾಡಲು ಸಾಧ್ಯವಿರುತ್ತದೆ. ಅದರಲ್ಲೂ ಶ್ರೀ. ಗಣೇಶ ಹೆಗಡೆ ಇವರು ಹೊಸದಾಗಿ ಮನೆ ನಿರ್ಮಾಣ ಮಾಡುತ್ತಿದ್ದು ಸದ್ರಿ ವಿದ್ಯುತ ಮಾರ್ಗ ಕಟ್ಟಡದ ಸಮೀಪದಿಂದ ಹಾದು ಹೋಗಬೇಕಾಗಿದ್ದು ಕಟ್ಟಡದಿಂದ ಇರಬೇಕಾದ ಕನಿಷ್ಟ ಅಂತರ ಪಾಲಿಸಲು ಸಮಸ್ಯೆಯಿರುತ್ತದೆ.. ನೀವು ಉಲ್ಲೇಖಿತ ಪತ್ರ–2 ರಲ್ಲಿ ಎನ್.ಐ.ಪಿ–34220 & ಎನ್.ಐ.ಪಿ–23 ಸ್ಥಾವರಗಳ ಸಂಪರ್ಕಕ್ಕೆ ವಿದ್ಯುತ ಲೈನ್ ಎಳೆಯುವ ಬಗ್ಗೆ ಶ್ರೀ ಕಾಶೀನಾಥ ಭಾಗ್ವತ ಇವರು ನ್ಯಾಯಾಲಯದಲ್ಲಿ ದಾವೆ ಹೂಡಿರುವ ಬಗ್ಗೆ ಹಾಗೂ ಸದ್ರಿ ಪ್ರಕರಣ ಆರ್.ಎ/5/2019 ವಿಚಾರಣಾ ಹಂತದಲ್ಲಿದ್ದು, ದಾವೆ ಇತ್ಯರ್ಥವಾಗುವವರೆಗೆ ಸದ್ರಿ ಸ್ಥಳದಲ್ಲಿ ವಿದ್ಯುತ ಮಾರ್ಗಕ್ಕೆ ಸಂಬಂಧಪಟ್ಟಂತೆ ಯಥಾ ಸ್ಥಿತಿ ಕಾಯ್ದುಕೊಳ್ಳಲು ಹೆಸ್ಕಾಂ ವಕೀಲರು ಸಲಹೆ ನೀಡಿರುವ ಬಗ್ಗೆ ಉಲ್ಲೇಖಿಸಿರುತ್ತೀರಿ.

ಆದ ಕಾರಣ ಹಾಲಿ ಇರುವ ಸುಮಾರು 80 ಮೀ ಉದ್ದವಾಗಿರುವ ಕೋಟೆಡ್ ವಾಯರ್‌ನಿಂದ ಗ್ರಾಹಕರಿಗೆ ವಿದ್ಯುತ ಪೂರೈಕೆಯಲ್ಲಿ ಸಮಸ್ಯೆ ಆಗುತ್ತಿರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಶ್ರೀ ಗಣೇಶ ಪರಮೇಶ್ವರ ಹೆಗಡೆ ಇವರ ಜಾಗದ ಗೇಟಿನ ಎದುರಿಗೆ ಇರುವ ಎಲ್.ಟಿ. ಕಂಬದಿಂದ ಟ್ಯಾಪ ಮಾಡಿಕೊಂಡು ಅವರದೇ ಜಾಗದಲ್ಲಿ ಅಗತ್ಯವಿರುವ ವಿದ್ಯುತ ಕಂಬಗಳನ್ನು ಅಳವಡಿಸಿ ವೀಸಲ್ ವಾಹಕ ಎಳೆದು ಸದ್ರಿಯವರ ಎನ್.ಐ.ಪಿ–34220 & ಎನ್.ಐ.ಪಿ–23 ಸ್ಥಾವರಗಳಿಗೆ ವಿದ್ಯುತ ಸಂಪರ್ಕ ನೀಡುವುದು ಸೂಕ್ತ ಎಂದು ಕಂಡುಬಂದಿರುತ್ತದೆ. ಆದ ಕಾರಣ ಈ ಮೇಲೆ ತಿಳಿಸಿರುವ ಅಂಶಗಳಿಗನುಗುಣವಾಗಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

5. **ಆರ್.ಆರ್.ಸಂಖ್ಯೆ :ಎನ್.ಎಲ್–38**

ಸದ್ರಿ ಸ್ಥಾವರದ ಮಾಪಕವನ್ನು ಶೆಡ್ ಮಾದರಿಯ ಕಟ್ಟಡ ಗೋಡೆಗೆ ಅಳವಡಿಸಲಾಗಿದೆ. ಸದ್ರಿ ಸ್ಥಾವರಕ್ಕೆ ವಿದ್ಯುತ ಸಂಪರ್ಕವಿರುವುದಿಲ್ಲ. ಸ್ಥಾವರಕ್ಕೆ ವಿದ್ಯುತ ಸಂಪರ್ಕ ನೀಡಿರುವ ದಿನಾಂಕ 06.09.1978 ಅಂದರೆ 44 ವರ್ಷ ಹಳೆಯದಾಗಿದ್ದು, ಮಾಪಕವನ್ನು ಇತ್ತೀಚಿಗೆ ಕಟ್ಟಿರುವ ಶೆಡ್‌ನ ಗೋಡೆಗೆ ಅಳವಡಿಸಲಾಗಿರುತ್ತದೆ. ಮೇ–2018 ರ ನಂತರ ಯಾವುದೇ ವಿದ್ಯುತ ಬಿಲ್ ಪಾವತಿ ಮಾಡಿರುವುದಿಲ್ಲ. ಕಾರಣ Conditions of Supply of electricity Clause No. 4.09 (xii)ರ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲು

ಸೂಚಿಸಲಾಗಿದೆ. ಸದ್ರಿ ಸ್ಥಾವರಕ್ಕೆ ರೂ.2140.00 ವಿದ್ಯುತ ಬಿಲ್ ಬಾಕಿ ಇರುತ್ತಿದ್ದು ಬಾಕಿ ವಸೂಲಾತಿಗೆ ಅಗತ್ಯ ಕ್ರಮ ಕೈಗೊಳ್ಳುವುದು.

6. **ಆರ್.ಆರ್.ಸಂಖ್ಯೆ: ಎನ್.ಆಯ್.ಪಿ–17**

ಸ್ಥಳ ಪರಿಶೀಲನೆ ಸಮಯದಲ್ಲಿ ಜಾಗದ ಪ್ರವೇಶದ ಎಡಭಾಗದಲ್ಲಿ ಎರಡು ಸಣ್ಣ ಕಂಬಗಳನ್ನು ಹುಗಿದು ಮೀಟರ್ ಬಾಕ್ಸ ಹಾಗೂ ಮೀಟರ್ ಅಳವಡಿಸಿದ್ದು ಕಂಡುಬಂದಿದ್ದು ಸರ್ವಿಸ್ ವಾಯರ್ ಕೆಳಗೆ ಬಿದ್ದಿರುತ್ತದೆ. ಗ್ರಾಹಕರು ಸದ್ರಿ ಮೀಟರ್ ಎನ್.ಆಯ್.ಪಿ–17 ಸ್ಥಾವರದ್ದಾಗಿದ್ದು ಅದಕ್ಕೆ ವಿದ್ಯುತ ಸಂಪರ್ಕ ನೀಡಲು ಕೇಳಿರುತ್ತಾರೆ. ಆದ ಕಾರಣ ಎನ್.ಆಯ್.ಪಿ–17 ಸ್ಥಾವರಕ್ಕೆ ಸಂಬಂಧಿಸಿದ ದಾಖಲೆಗಳನ್ನು/ ಕಡತಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಂಡು ವಸ್ತುಸ್ಥಿತಿಯ ವರದಿ ನೀಡಲು ಸೂಚಿಸಲಾಗಿದೆ.

ಈ ಮೇಲಿನ ವಿಷಯಗಳು ಉಪವಿಭಾಗಾಧಿಕಾರಿ ಮಟ್ಟದಲ್ಲೇ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗಿದ್ದ ವಿಷಯಗಳಾಗಿರುತ್ತವೆ. ದಿ. 16.12.2022 ರಂದು ಕೆಳಸಹಿದಾರರು ವೃತ್ತ ಕಚೇರಿಗೆ ವಿಚಾರಣೆಗೆ ಹಾಜರಾಗಬೇಕಾಗಿದ್ದು ಉಲ್ಲೇಖಿಸಿರುವ ವಿಷಯಗಳಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಂಡು 15.12.2022 ರೊಳಗೆ ವರದಿ ನೀಡಲು ಸೂಚಿಸಲಾಗಿದೆ.

**ತಮ್ಮ ವಿಶ್ವಾಸಿ,**

**ಕಾರ್ಯನಿರ್ವಾಹಕ ಇಂಜಿನಿಯರ್(ವಿ)**
**ಕಾರ್ಯ & ಪಾಲನಾ ವಿಭಾಗ ನಹು.ವಿ.ಸ.ಕಂ.ನಿ ಹೊನ್ನಾವರ**

ಈ ಮೇಲಿನ ಹೇಳಿಕೆಯಿಂದ ವಿದ್ಯುತ್ ಸಂಪರ್ಕವನ್ನು ಸಮರ್ಪಕವಾಗಿ ನೀಡಲು ಪರ್ಯಾಯ ಮಾರ್ಗಗಳಿದ್ದಾಗ್ಯೂ ಸಹ ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ ರವರ ಅಸಹಕಾರದಿಂದ ಹಾಗೂ ಅನಗತ್ಯ ತಕರಾರುಗಳಿಂದ ಸಮಸ್ಯೆ ಬಗೆಹರಿಯದಿರುವದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಈ ಬಗ್ಗೆ ಗೌರವಾನ್ವಿತ ಉತ್ತರಕನ್ನಡ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯು C.C.No.-137/2010 ರ ತೀರ್ಪಿನ 15 ನೇ ಪ್ಯಾರಾದಲ್ಲಿ ದಾಖಲಿಸಿದ ಈ ಕೆಳಗಿನ ಅಂಶಗಳನ್ನು ಗಮನಿಸಬಹುದಾಗಿದೆ.

"15) ....... **<u>If the complainant had not objected for the shifting work the KPTCL authorities could have restored the power supply without any difficulty</u>. But they could not restore the power supply only because of the objection raised by the complainant. Since the fault lies with the complainant, he cannot maintain a complaint under C.P. Act alleging deficiency of service on the part of the KPTCL authorities. Consequently, we answer point No.1 in the negative**."

ಗೌರವಾನ್ವಿತ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು Appeal No-2220/2011 ರ ತೀರ್ಪಿನ 10 ನೇ ಪ್ಯಾರಾದಲ್ಲಿ ದಾಖಲಿಸಿದ ಈ ಕೆಳಗಿನ ಅಂಶಗಳನ್ನೂ ಸಹ ಗಮನಿಸಬಹುದಾಗಿದೆ.

"10. Merely because there was a civil dispute between him and others is not a ground to complete the shifting of electric line which was passing from the middle of land of Sy. No. 81/2 to the western edge. Therefore, there is no deficiency of service on the part of OPs and the appellant has not shown any good reasons to entertain this appeal. Therefore, viewed from any angle, we don't notice any perverse or incorrect finding recorded by the DF in passing the impugned order under appeal and it does not require any interference. Accordingly, we pass the following"

ವೇದಿಕೆಯು ಈ ಮೇಲಿನ ಎಲ್ಲಾ ಅಂಶಗಳನ್ನು, ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು, ಉಭಯಪರ ವಾದ ವಿವಾದಗಳನ್ನು ಕೇಳಿ ಹಾಗೂ ಹೇಳಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಚರ್ಚಿಸಿ ಒಮ್ಮತದಿಂದ ಈ ಕೆಳಗಿನಂತೆ ನಿರ್ಣಯಿಸಿ ಆದೇಶ ಮಾಡುತ್ತಿದ್ದೇವೆ.

**ಆದೇಶ ಸಂಖ್ಯೆ: ಅಇಂ(ವಿ)/ಉಲೆನಿ/CGRF/ಪ್ರ.ಸಂ. 35/2022/2022–23/ಸಿವೈಎಸ್:**-376 **ದಿನಾಂಕ:** 18 JAN 2023

## ಆದೇಶ

ದೂರನ್ನು ವಜಾಮಾಡಲಾಗಿದೆ.

ವಿಚಾರಣಾ ಸಂದರ್ಭದಲ್ಲಿ ಗಮನಕ್ಕೆ ಬಂದ ಇನ್ನಿತರ ತಕರಾರುಗಳ ಬಗ್ಗೆ ದೂರುದಾರರಾದ ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ॥ ಹೊನ್ನಾವರ ಹಾಗೂ ಹೆಸ್ಕಾಂ ಅಧಿಕಾರಿಗಳು ಕಾನೂನು ಬದ್ಧವಾದ ಮುಂದಿನ ಕ್ರಮ ಕೈಗೊಳ್ಳಲು ಸ್ವತಂತ್ರರಾಗಿರುತ್ತಾರೆ.

[ಲೋಕೇಶ ಎಲ್. ಹೆಗಡೆ]
ಆಯೋಗದಿಂದ ನಿಯೋಜಿಸಲಾದ
ಅಧಿಕಾರೇತರ ಸದಸ್ಯರು,
ಗ್ರಾಹಕರ ಕುಂದು ಕೊರತೆ ನಿವಾರಣಾ
ವೇದಿಕೆ,
ಉತ್ತರ ಕನ್ನಡ.

[ಎಸ್.ವಿ. ಪ್ರಭು]
ಉಪ–ಲೆಕ್ಕನಿಯಂತ್ರಣಾಧಿಕಾರಿ,
ಹಾಗೂ ಸದಸ್ಯರು
ಗ್ರಾಹಕರ ಕುಂದು ಕೊರತೆ ನಿವಾರಣಾ
ವೇದಿಕೆ, ಉತ್ತರ ಕನ್ನಡ.
ಕಾರ್ಯ ಮತ್ತು ಪಾಲನಾ ವೃತ್ತ,
ಹೆಸ್ಕಾಂ, ಶಿರಸಿ.

18/1/2023
[ದೀಪಕ ಬಿ. ಕಾಮತ]
ಅಧೀಕ್ಷಕ ಇಂಜಿನಿಯರ್(ವಿ),
ಹಾಗೂ ಅಧ್ಯಕ್ಷರು
ಗ್ರಾಹಕರ ಕುಂದು ಕೊರತೆ ನಿವಾರಣಾ
ವೇದಿಕೆ, ಉತ್ತರ ಕನ್ನಡ.
ಕಾರ್ಯ ಮತ್ತು ಪಾಲನಾ ವೃತ್ತ,
ಹೆಸ್ಕಾಂ, ಶಿರಸಿ.

ಪ್ರತಿಯನ್ನು ಶ್ರೀ. ಗಣೇಶ ಪರಮೇಶ್ವರ ಹೆಗಡೆ, ನೀಲಕೋಡ, ತಾ: ಹೊನ್ನಾವರ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ **ನೋಂದಣಿ ಅಂಚೆ ಸ್ವೀಕೃತಿ ಬಾಕಿ ಮೂಲಕ** ಕಳುಹಿಸಿದೆ.

ಪ್ರತಿ :

1. ಮುಖ್ಯ ಇಂಜಿನಿಯರ್(ವಿ), ಹುಬ್ಬಳ್ಳಿ ವಲಯ, ಹೆಸ್ಕಾಂ, ಕೇಶ್ವಾಪುರ ಹುಬ್ಬಳ್ಳಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಾರ್ಯಾಲಯ, ಹೆಸ್ಕಾಂ, ಹುಬ್ಬಳಿ.
3. ಕಾರ್ಯನಿರ್ವಾಹಕ ಇಂಜಿನಿಯರ್(ವಿ) (ಆರ್.ಎ), ನಿಗಮ ಕಛೇರಿ, ಹೆಸ್ಕಾಂ, ಹುಬ್ಬಳ್ಳಿ.

ಪ್ರತಿಯನ್ನು: ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ, ಹೊನ್ನಾವರ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ **ನೋಂದಣಿ ಅಂಚೆ ಸ್ವೀಕೃತಿ ಬಾಕಿ ಮೂಲಕ** ಕಳುಹಿಸಿದೆ.

ಪ್ರತಿಯನ್ನು: ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ–ವಿಭಾಗ, ಹೆಸ್ಕಾಂ, ಹೊನ್ನಾವರ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ **ನೋಂದಣಿ ಅಂಚೆ ಸ್ವೀಕೃತಿ ಬಾಕಿ ಮೂಲಕ** ಕಳುಹಿಸಿದೆ.

ಪ್ರತಿ: ಕಛೇರಿ ಪ್ರತಿ/ಮಹಾ ಕಡತ.